ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಫೆಬ್ರವರಿ 18, 2025

ಸಂಪುಟ : 51 ಸಂಚಿಕೆ : 277 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




**ಈರಣ್ಣನ ತೇರು ..** ದಾವಣಗೆರೆ ತಾಲ್ಲೂಕು ಆವರಗೊಳ್ಳ ಗ್ರಾಮದಲ್ಲಿ ಶ್ರೀ ವೀರಭದ್ರೇಶ್ವರ ಸ್ವಾಮಿ ಜಾತ್ರೆಯು ಸೋಮವಾರ ಸಂಜೆ ಅಪಾರ ಭಕ್ತರ ಸಮ್ಮುಖದಲ್ಲಿ ಅದ್ಧೂರಿಯಾಗಿ ನೆರವೇರಿತು.

## ಹಲವು ಗೊಂದಲಗಳ ಸಾಮಾನ್ಯ ಸಭೆ

### ಕೊನೆ ಸಭೆಯಲ್ಲೂ ಮುಂದುವರಿದ ಆಡಳಿತ-ಪ್ರತಿಪಕ್ಷದ ವಾಕ್ಸಮರ



**ಚರಂಡಿ ಕಲ್ಲು ಹಾಕಿ ಜರ್ಮನ್ ಮಾದರಿ ಎನ್ನುತ್ತೀರಿ ಎಂದು ಟೀಕಿಸಿದ ಸದಸ್ಯ ಕೆ. ಪ್ರಸನ್ನ ಕುಮಾರ್‌ಗೆ ಕಾಮಗಾರಿ ಪೂರ್ತಿ ಆದ ನಂತರ ಜರ್ಮನ್ ಮಾದರಿ ಬಗ್ಗೆ ಮಾತನಾಡಿ ಎಂದ ಗಡಿಗುಡಾಳ್ ಮಂಜುನಾಥ್**

ದಾವಣಗೆರೆ, ಫೆ. 17- ಅಧಿಕಾರಿಗಳು ಪ್ರತಿ ಬಾರಿಯೂ ತಪ್ಪು ಮಾಡುತ್ತಾರೆ. ತಪ್ಪು ಮಾಡುವುದು ಸಂವಿಧಾನ ಮತ್ತು ಸಭೆಗೆ ಮಾಡುವ ಅವಮಾನ ಎಂದು ಪಾಲಿಕೆ ಸದಸ್ಯ ಬಿಜೆಪಿಯ ಕೆ. ಪ್ರಸನ್ನಕುಮಾರ್ ಎಂದು ಹೇಳಿದರು.

ನಗರದ ಮಹಾನಗರ ಪಾಲಿಕೆ ಸಭಾಂಗಣದಲ್ಲಿ ಇಂದು ನಡೆದ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, ಸಾಮಾನ್ಯ ಸಭೆಯ ಅಜೆಂಡಾ ಪ್ರತಿಯಲ್ಲಿನ ತಪ್ಪು ಆಗಿರುವ ಬಗ್ಗೆ ಗಮನಿಸಿದ ಪ್ರಸನ್ನಕುಮಾರ್ ಅಧಿಕಾರಿಗಳು ಪ್ರತಿ ಬಾರಿ ತಪ್ಪು ಮಾಡುತ್ತಿದ್ದಾರೆಂದು ದೂರಿದರು.

ದೊಡ್ಡ ಪ್ರಮಾದವೇನೂ ಆಗಿಲ್ಲ. ಆದರೂ ಮೇಯರ್ ಅವರು ಕಣ್ಣುಮುಚ್ಚಿ ಸಹಿ ಹಾಕುತ್ತಾರೆ ಎಂಬ ಆರೋಪ ಸರಿಯಲ್ಲ. ಮೇಯರ್ ಅವರು ಕಡಿಮೆ ಅವಧಿಯಲ್ಲಿಯೇ ಆರು ಸಭೆಗಳನ್ನು ನಡೆಸಿದ್ದಾರೆಂದು ಹೇಳಿದರು.

ಮೇಯರ್ ಕಡಿಮೆ ಅವಧಿಯಲ್ಲಿ ಆರು ಸಭೆ ನಡೆಸಿದ್ದಾರೆ. ಅವುಗಳು ಎಲ್ಲವೂ ತೌಡು ಕುಟ್ಟಿದರು ಎನ್ನುವಂತಾಗಿದೆ ಎಂದು ಪ್ರಸನ್ನಕುಮಾರ್ ತಿರುಗೇಟು ನೀಡಿದರು.

ನಗರದ ಅಭಿವೃದ್ಧಿ ವಿಚಾರಕ್ಕೆ ಸಂಬಂಧಿಸಿದ ಚರ್ಚೆ ಸಮಯದಲ್ಲಿ ಮೂರು ವರ್ಷಗಳ ಅಧಿಕಾರವಧಿಯಲ್ಲಿ ಬಿಜೆಪಿಯವರಾದ ನೀವು ಏನು ಮಾಡಿದ್ದೀರಿ. ಯಾವುದೇ ಕೆಲಸಗಳೂ ಆಗಿಲ್ಲ ಎಂದು ಸದಸ್ಯ ಎ.ನಾಗರಾಜ್ ದೂರಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಮೇಯರ್ ಕೆ. ಚಮನ್ ಸಾಬ್ ಮಾತನಾಡಿ, ಪ್ರಸಕ್ತ ಸಾಲಿನ ಕೊನೆಯ ಸಾಮಾನ್ಯ ಸಭೆ ಇದ್ದಾಗಿದ್ದು, ಇದುವರೆಗಿನ ಕಹಿ ನೆನಪುಗಳನ್ನು ಮರೆತು ಸಿಹಿ ನೆನಪುಗಳೊಂದಿಗೆ ಮುಂದೆ ಸಾಗೋಣ. ಮಾದರಿ ಸಭೆಯನ್ನಾಗಿಸೋಣ ಎಂದು ಹೇಳಿದರು.

ತಪ್ಪುಗಳಾದರೆ ಸೂಕ್ತ ಕ್ರಮ ಕೈಗೊಳ್ಳುವಂತೆ ಮೇಯರ್ ಚಮನ್‌ಸಾಬ್ ಆಯುಕ್ತರಾದ ರೇಣುಕಾ ಅವರಿಗೆ ಸೂಚಿಸಿದರು.

ಮಾಜಿ ಮೇಯರ್ ಉಮಾ ಪ್ರಕಾಶ್ ಮಾತನಾಡಿ, ನಮ್ಮ ವಾರ್ಡಿನಲ್ಲಿ (4ನೇ ಪುಟಕ್ಕೆ)

## ಮೇ ನಂತರ ಜಿ.ಪಂ, ತಾ.ಪಂ ಚುನಾವಣೆಗೆ ಸರ್ಕಾರ ಸಿದ್ಧ

**ಹೈಕೋರ್ಟ್‌ಗೆ ಅಡ್ವೋಕೇಟ್ ಜನರಲ್ ಶಶಿಕಿರಣ ಶೆಟ್ಟಿ ಮಾಹಿತಿ**

ಬೆಂಗಳೂರು,ಫೆ.17- ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್ ಚುನಾವಣೆಗಳನ್ನು ಮೇ ನಂತರ ನಡೆಸುವುದಾಗಿ ಸರ್ಕಾರ ಪ್ರಕಟಿಸಿದೆ.

ಸರ್ಕಾರದ ಈ ಹೇಳಿಕೆಯಿಂದ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯತ್‌ಗಳಿಗೆ ಮೂರೂವರೆ ವರ್ಷಗಳ ಆಡಳಿತಾಧಿಕಾರಿಗಳ ಹಿಡಿತದಿಂದ ಮುಕ್ತಿ ದೊರೆಯಲಿದೆ.

ಸ್ಥಳೀಯ ಸಂಸ್ಥೆಗಳಿಗೆ ಕಳೆದ ಮೂರೂವರೆ ವರ್ಷಗಳಿಂದ ಚುನಾವಣೆ ನಡೆಸದಿರುವ ಹಿನ್ನೆಲೆಯಲ್ಲಿ ರಾಜ್ಯ ಚುನಾವಣಾ ಆಯೋಗ ಸಲ್ಲಿಸಿದ್ದ ನ್ಯಾಯಾಂಗ ನಿಂದನೆ ಅರ್ಜಿ ವಿಚಾರಣೆ ಸಂದರ್ಭದಲ್ಲಿ ಹೈಕೋರ್ಟ್‌ಗೆ ಅಡ್ವೋಕೇಟ್ ಜನರಲ್ ಶಶಿಕಿರಣ ಶೆಟ್ಟಿ ಈ ಮಾಹಿತಿ ನೀಡಿದ್ದಾರೆ.

ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್ ಕ್ಷೇತ್ರಗಳಿಗೆ ಮೀಸಲಾತಿ ಪಟ್ಟಿಯನ್ನು ಸರ್ಕಾರ ನೀಡಿದರೆ, ಆಯೋಗ ಚುನಾವಣೆ ನಡೆಸಲು ಸಿದ್ಧ ಎಂದು ಆಯೋಗದ ಪರ ಹಿರಿಯ ವಕೀಲ ಕೆ.ಎನ್. (2ನೇ ಪುಟಕ್ಕೆ)

## ಹೋರಾಟಗಳಿಂದ ಎಲ್ಲವೂ ಸಾಧ್ಯ : ಎಸ್ಸೆಸ್ಸೆಂ



ದಾವಣಗೆರೆ, ಫೆ. 17 - ಒಗ್ಗಟ್ಟಿನಿಂದ ಸಾಧಿಸಲಾಗದ್ದನ್ನು ಸಾಧಿಸಬಹುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹೇಳಿದರು.

ಹಳೇ ಕುಂದುವಾಡ ಗ್ರಾಮದಲ್ಲಿ ಇಂದು ಏರ್ಪಾಡಾಗಿದ್ದ ಶ್ರೀ ಆಂಜನೇಯ ಸ್ವಾಮಿ ಮತ್ತು ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನದ ಉದ್ಘಾಟನೆ ಶಿಲಾಮೂರ್ತಿ ಪ್ರತಿಷ್ಠಾಪನೆ ಮತ್ತು ಪ್ರಾಣ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ಕಾರ್ಯಕ್ರಮದಲ್ಲಿ ಭಾಗಿಯಾಗಿ ಅವರು ಮಾತನಾಡಿದರು.

ನೆನೆಗುದಿಗೆ ಬಿದ್ದಿದ್ದ ಹಳೇ ಕುಂದುವಾಡದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಅಭಿವೃದ್ಧಿಗೆ ಈಗ ಕಾಯಕಲ್ಪ ಮೂಡಿ ಬಂದಿದ್ದು, (4ನೇ ಪುಟಕ್ಕೆ)

## ಮಾರ್ಚ್ 7ರಂದು ಬಜೆಟ್ ಮಂಡನೆ: ಸಿಎಂ

ಬೆಂಗಳೂರು,ಫೆ.17- ಜನರಿಗೆ ಹೊರೆಯಾಗದಂತೆ ಮುಂಗಡ ಪತ್ರದಲ್ಲಿ ಒತ್ತು ಕೊಡುವುದಾಗಿ ಹಣಕಾಸು ಖಾತೆಯನ್ನೂ ಹೊಂದಿರುವ ಮುಖ್ಯ ಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ಮಾರ್ಚ್ 3ರಿಂದ ವಿಧಾನಮಂಡಲ ಅಧಿವೇಶನ ಕರೆಯಲು ತೀರ್ಮಾನಿಸಿದ್ದು, 7ರಂದು 2025-26ನೇ ಸಾಲಿನ ಮುಂಗಡ ಪತ್ರ ಮಂಡಿಸಲಿದ್ದೇನೆ.

ಬೆಲೆ ಏರಿಕೆಯಿಂದ ಜನರು ಕಂಗಾಲಾಗಿರು ವುದನ್ನು ತಳ್ಳಿಹಾಕುವುದಿಲ್ಲ, ಏರಿಕೆ ಹೊರೆ ಇಳಿಸುವ ಹೊಣೆ ನಮಗಿಂತ ಕೇಂದ್ರ ಸರ್ಕಾರದ ಮೇಲಿದೆ.

ಹಾಗೆಂದು ನಾವು ಸುಮ್ಮನಿರುವುದಿಲ್ಲ, ಇಳಿಕೆಗೆ ನಮ್ಮ ಪ್ರಯತ್ನವಿದೆ. ಇದನ್ನು ಗಮನದಲ್ಲಿಟ್ಟು ಕೊಂಡೇ ಬಜೆಟ್ (4ನೇ ಪುಟಕ್ಕೆ)

### ಬಜೆಟ್‌ನಲ್ಲಿ ಕೃಷಿಗೆ ಆದ್ಯತೆ

**ಬೆಂಗಳೂರು,ಫೆ.17-ಅತಿ ಹೆಚ್ಚು ಉದ್ಯೋಗ ಅವಲಂಬನೆ ಕೃಷಿ ಕ್ಷೇತ್ರದಲ್ಲಿ ಇರುವುದರಿಂದ, ರೈತರ ಬೇಡಿಕೆಗಳ ಈಡೇರಿಕೆ ಪ್ರಥಮ ಆದ್ಯತೆಯಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.**

**ತಾವೂ ರೈತ ಕುಟುಂಬದಿಂದ ಬಂದಿದ್ದು, ಸದಾ ಕೃಷಿಕರ ಪರವಾಗಿ ಇರುವುದಲ್ಲದೆ, ರೈತಾಪಿ ಜನರ** (4ನೇ ಪುಟಕ್ಕೆ)

## ಗ್ರಾಮಗಳಲ್ಲಿ ಸೌಹಾರ್ದತೆಗೆ ಮಹತ್ವ ನೀಡಿ

### ಹಳೇಕುಂದುವಾಡ ದೇವಸ್ಥಾನ ಉದ್ಘಾಟನಾ ಸಮಾರಂಭದಲ್ಲಿ ಮಾದಾರ ಚನ್ನಯ್ಯ ಶ್ರೀ



ದಾವಣಗೆರೆ, ಫೆ.17- ದೇವಸ್ಥಾನಗಳಲ್ಲಿ ಪಾತವಿತ್ರ್ಯತೆಗೂ, ಗ್ರಾಮಗಳಲ್ಲಿ ಸೌಹಾರ್ದತೆಗೂ ಮಹತ್ವ ನೀಡುವಂತೆ ಚಿತ್ರದುರ್ಗದ ಮಾದರ ಚನ್ನಯ್ಯ ಗುರುಪೀಠದ ಮಾದಾರ ಚನ್ನಯ್ಯ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಹಳೇಕುಂದುವಾಡ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ಮತ್ತು ಶ್ರೀ ಬಸವೇಶ್ವರ ದೇವಸ್ಥಾನದ ಉದ್ಘಾಟನೆ, ಶಿಲಾಮೂರ್ತಿ ಪ್ರತಿಷ್ಠಾಪನೆ ಮತ್ತು ಪ್ರಾಣ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಗ್ರಾಮಗಳಲ್ಲಿ ಆರ್ಥಿಕ ಸ್ಥಿತಿಗತಿಗಳಿಗೆ ಅನುಗುಣವಾಗಿ ದೇವಸ್ಥಾನಗಳು ಇರುತ್ತಿದ್ದವು. ಆದರೆ ಇಂದು ಉತ್ತಮ ದೇವಸ್ಥಾನಗಳು ನಿರ್ಮಾಣವಾಗುತ್ತಿವೆ. ಅದರಲ್ಲೂ ಕುಂದುವಾಡದಲ್ಲಿ ನಿರ್ಮಾಣವಾಗಿರುವ ಈ ದೇವಸ್ಥಾನ ಯಾವ ಮಹಾನಗರದಲ್ಲಿನ ದೇವಸ್ಥಾನಗಳಿಗೂ ಸಾಟಿ ಇಲ್ಲ ಎಂಬಂತಿದೆ ಎಂದರು.

ದೇಶವು ತಂತ್ರಜ್ಞಾನದಲ್ಲಿ ಎಷ್ಟೇ ಮುಂದುವರೆದರೂ ಧಾರ್ಮಿಕ ಭಾವನೆಗಳನ್ನು ಬಿಟ್ಟು ನಡೆಯುವ ಪರಿಸ್ಥಿತಿ ಇಲ್ಲ. ನಮ್ಮ ದೇಶದ ಜನರು ದೇವಸ್ಥಾನ, ಮಠ-ಮಂದಿರಗಳನ್ನು ಬಿಟ್ಟು ಇರಲು ಸಾಧ್ಯವೇ ಇಲ್ಲ ಎನ್ನುವಂತಿದೆ. ಹೀಗಾಗಿ ದೇವಸ್ಥಾನದ ಉದ್ಘಾಟನೆ ವೇಳೆ ಪಾವಿತ್ರ್ಯತೆಗೆ ನೀಡುವ ಮಹತ್ವವನ್ನು ಮುಂದಿನ ದಿನಗಳಲ್ಲೂ ಕಾಪಾಡಿಕೊಂಡು ಹೋಗಬೇಕು ಎಂದು ಸಲಹೆ ನೀಡಿದರು.

ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಮಾತನಾಡುತ್ತಾ, ಬಸವಣ್ಣ ಮಾನವ ಕುಲದ ಉದ್ಧಾರಕ್ಕೆ ಹುಟ್ಟಿದ ಪುಣ್ಯಾತ್ಮ. ಬಸವ ತತ್ವ ಪಾಲನೆಯಿಂದ ಜಗತ್ತಿನ ಉದ್ಧಾರ, ಕಲ್ಯಾಣವಾಗುತ್ತದೆ. ಸುಖ-ಶಾಂತಿ ನೆಮ್ಮದಿ ಸಿಗುತ್ತದೆ. ಅಂತಹ ಬಸವ ತತ್ವ ಪಾಲನೆ ಮಾಡಿದ ಗ್ರಾಮ ಕುಂದುವಾಡ ಗ್ರಾಮ ಎಂದು ಶ್ಲಾಘಿಸಿದರು.

ಸಮಾನತೆ ತತ್ವ ಇಲ್ಲಿ ಅನಾವರಣಗೊಂಡಿದೆ. ಬಸವೇಶ್ವರ ದೇವಾಲಯ ಕಟ್ಟುವ ಮೂಲಕ ಸರ್ವ ಜನಾಂಗದ ಮನಸ್ಸು ಕಟ್ಟಿದ್ದೀರಿ. ದೇವಸ್ಥಾನ ಕಟ್ಟುವುದು ಸುಲಭ. ಆದರೆ (4ನೇ ಪುಟಕ್ಕೆ)

## ಠೇವಣಿ ವಿಮೆ ಮಿತಿ 5 ಲಕ್ಷ ರೂ. ಗಳಿಗಿಂತ ಹೆಚ್ಚಿಸಲು ಪರಿಶೀಲನೆ

ನವದೆಹಲಿ, ಫೆ. 17 - ಠೇವಣಿಗಳ ವಿಮೆ ಮೇಲಿನ ಮಿತಿಯನ್ನು 5 ಲಕ್ಷ ರೂ.ಗಳಿಗಿಂತ ಹೆಚ್ಚಿಸಲು ಕೇಂದ್ರ ಸರ್ಕಾರ ಸಕ್ರಿಯವಾಗಿ ಪರಿಶೀಲಿಸುತ್ತಿದೆ ಎಂದು ಹಣಕಾಸು ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪ್ರಸಕ್ತ ಠೇವಣಿಗಳ ಮೇಲಿನ ವಿಮೆ ಮಿತಿ 5 ಲಕ್ಷ ರೂ. ಆಗಿದೆ. ಇದನ್ನು ಹೆಚ್ಚಿಸಲು ಸರ್ಕಾರ ಸಕ್ರಿಯವಾಗಿ ಪರಿಶೀಲಿಸುತ್ತಿದೆ. ಸರ್ಕಾರ ಒಪ್ಪಿಗೆ ನೀಡಿದ ನಂತರ ಈ ಬಗ್ಗೆ ಪ್ರಕಟಿಸಲಾಗುವುದು ಎಂದು ಹಣಕಾಸು ಸೇವೆಗಳ ಇಲಾಖೆ ಕಾರ್ಯದರ್ಶಿ ಎಂ. ನಾಗರಾಜು ತಿಳಿಸಿದ್ದಾರೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಜೊತೆ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಅವರು ಈ ವಿಷಯ ತಿಳಿಸಿದ್ದಾರೆ.

ಬ್ಯಾಂಕುಗಳು ಕುಸಿದ ಸಂದರ್ಭದಲ್ಲಿ ಅಲ್ಲಿನ ಠೇವಣಿಗಳ ಮೇಲೆ ವಿಮೆ ಇದ್ದಾಗ, ವಿಮಾ ಸಂಸ್ಥೆಗಳ ಮೂಲಕ ಠೇವಣಿದಾರರಿಗೆ ಹಣ ನೀಡಲಾಗುತ್ತದೆ. ಠೇವಣಿ ವಿಮಾ ಹಾಗೂ ಸಾಲ ಗ್ಯಾರಂಟಿ ನಿಗಮ ಈ (4ನೇ ಪುಟಕ್ಕೆ)

## ಪರೀಕ್ಷೆಗಾಗಿ ಪ್ಯಾರಾ ಗ್ಲೈಡರ್ ಸವಾರಿ ಮಾಡಿದ ಕಾಲೇಜು ಯುವಕ

ಪುಣೆ, ಫೆ. 17 - ಮಹಾರಾಷ್ಟ್ರದ ಸತಾರಾ ಜಿಲ್ಲೆಯ ಬೆಟ್ಟಗಳ ಪ್ರದೇಶದಲ್ಲಿರುವ 20 ವರ್ಷದ ಕಾಲೇಜು ವಿದ್ಯಾರ್ಥಿಯೊರ್ವ ತನ್ನ ಪರೀಕ್ಷೆಗೆ ಹಾಜರಾಗಲು ಪ್ಯಾರಾ ಗ್ಲೈಡರ್ ಬಳಸಿರುವುದು ವೈರಲ್ ಆಗಿದೆ.

ಅಂತಿಮ ವರ್ಷದ ಬಿಕಾಂ ವಿದ್ಯಾರ್ಥಿ ಸಮರ್ಥ್ ಮಹಾಂಗ್ಡೆ ಅವರು ಕಳೆದ ಡಿಸೆಂಬರ್ 15ರಂದು ಅಂತಿಮ ವರ್ಷದ ಮೊದಲ ಸೆಮಿಸ್ಟರ್ ಪರೀಕ್ಷೆಗೆ ತೆರಳಲು ಪ್ಯಾರಾ ಗ್ಲೈಡರ್ ಬಳಸಿದ್ದಾರೆ.

ಅವರು ಅಂದು ಮಧ್ಯಾಹ್ನ 2.15ರ ಸಮಯದಲ್ಲಿ ನೈಸರ್ಗಿಕ ವಿಕೋಪ ನಿರ್ವಹಣೆ ವಿಷಯದ ಪರೀಕ್ಷೆಗೆ ಹಾಜರಾಗಬೇಕಿತ್ತು. ಆದರೆ ಪರೀಕ್ಷೆ ಹಲವು ಬಾರಿ ಮುಂದೂಡಲಾಗಿತ್ತು. ಹೀಗಾಗಿ ಪರೀಕ್ಷೆಗೆ (4ನೇ ಪುಟಕ್ಕೆ)

## ರಫ್ತು ಇಳಿಕೆ, ವ್ಯಾಪಾರಿ ಕೊರತೆ ಏರಿಕೆ

ನವದೆಹಲಿ, ಫೆ. 17- ಜನವರಿ ತಿಂಗಳಲ್ಲಿ ದೇಶದ ರಫ್ತು ಶೇಕಡ 2.38 ಇಳಿಕೆಯಾಗಿದ್ದು 37.32 ಶತಕೋಟಿ ಡಾಲರ್‌ಗೆ ತಲುಪಿದೆ. ಪೆಟ್ರೋಲಿಯಂ ಬೆಲೆ ವ್ಯತ್ಯಾಸ ಹಾಗೂ ಜಾಗತಿಕ ಅನಿಶ್ಚಿತತೆಗಳ ಹಿನ್ನೆಲೆಯಲ್ಲಿ ರಫ್ತು ಇಳಿಮುಖವಾಗಿದೆ. ಇದೇ ತಿಂಗಳಲ್ಲಿ ವ್ಯಾಪಾರಿ ಕೊರತೆ ಶೇಕಡ 10.28 ರಷ್ಟು ಹೆಚ್ಚಾಗಿ 23 ಶತಕೋಟಿ ಡಾಲರ್‌ಗಳಿಗೆ ತಲುಪಿದೆ.


**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



॥ ಕೊಡದಗುಡ್ಡ ವೀರಭದ್ರೇಶ್ವರಸ್ವಾಮಿ ಪ್ರಸನ್ನ ॥

ಶ್ರೀಮತಿ ಜೆ.ಬಿ. ಮಹಾನಂದ ಮತ್ತು ಡಾ॥ ಭರತ್ ಭೂಷಣ್
ದಾವಣಗೆರೆ
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 06-02-2025ನೇ ಗುರುವಾರ ರಾತ್ರಿ 11.30ಕ್ಕೆ ನಮ್ಮ ಪೂಜ್ಯ ತಾಯಿವರಾದ
**ಶ್ರೀಮತಿ ಉಮಾ ವೀರಭದ್ರಪ್ಪ**
(ದಿ॥ ಶ್ರೀ ಜೆ.ಎನ್. ವೀರಭದ್ರಪ್ಪ, ಜಗಳೂರು ಇವರ ಧರ್ಮಪತ್ನಿ)
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ 19.02.2025ನೇ ಬುಧವಾರ ಬೆಳಿಗ್ಗೆ 10.30 ಗಂಟೆಗೆ ದಾವಣಗೆರೆ ಎ.ವಿ.ಕೆ. ಕಾಲೇಜು ರಸ್ತೆಯಲ್ಲಿರುವ ಅಕ್ಕಮಹಾದೇವಿ ಕಲ್ಯಾಣ ಮಂಟಪದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುತ್ತಾರೆ. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು, ಶ್ರೀಮತಿ ಜೆ.ಬಿ. ಮಹಾನಂದ, ಡಾ॥ ಭರತ್ ಭೂಷಣ್ ಮತ್ತು ಮಕ್ಕಳು
ಶ್ರೀಮತಿ ಸುಧಾ, ಶ್ರೀ ಸಿದ್ದರಾಮ ಸ್ವಾಮಿ ಮತ್ತು ಮಕ್ಕಳು
ಶ್ರೀಮತಿ ದ್ರಾಕ್ಷಾಯಣಿ ಮತ್ತು ಮಕ್ಕಳು
ಜಗಳೂರು ವಂಶಸ್ಥರು ಹಾಗೂ ಬಂಧು-ಮಿತ್ರರು. ಮೊ. : 96111 77078



**ಜನ್ಮದಿನದ ಶುಭಾಶಯಗಳು**



ತಮ್ಮ ಸಾರ್ಥಕ ಬದುಕಿನ
44 ವಸಂತಗಳನ್ನು ಯಶಸ್ವಿಯಾಗಿ
ಪೂರೈಸಿ, 16.02.2025 ರಂದು
45ನೇ ವರ್ಷಕ್ಕೆ ಪಾದಾರ್ಪಣೆ
ಮಾಡಿರುವ ಹೊನ್ನಾಳಿ ಕ್ಷೇತ್ರದ
ಜನಪ್ರಿಯ ಶಾಸಕರಾದ
**ಶ್ರೀ ಡಿ.ಜಿ. ಶಾಂತನಗೌಡರ**
ಪುತ್ರ ಹಾಗೂ ದಾವಣಗೆರೆ ಜಿಲ್ಲಾ ಕೇಂದ್ರ
ಸಹಕಾರ ಬ್ಯಾಂಕಿನ ನಿರ್ದೇಶಕರೂ ಆದ
ನಮ್ಮೆಲ್ಲರ ಆತ್ಮೀಯ ಗೆಳೆಯ
**ಶ್ರೀ ಡಿ.ಎಸ್. ಸುರೇಂದ್ರ**
ಅವರಿಗೆ ಹುಟ್ಟು ಹಬ್ಬದ
ಶುಭಾಶಯಗಳನ್ನು ಕೋರುತ್ತಾ,
ಭಗವಂತ ನಿಮಗೆ ಸದಾ ಆಯುರಾರೋಗ್ಯ
ಭಾಗ್ಯ ಕರುಣಿಸಲಿ ಮತ್ತು ಉಜ್ವಲ ಭವಿಷ್ಯ
ರೂಪಿಸಲೆಂದು ಶುಭ ಹಾರೈಸುವ...

**ಸ್ನೇಹಿತರ ಬಳಗ**
**ಅನುಭವ ಮಂಟಪ ಶಾಲೆ, ದಾವಣಗೆರೆ.**

# ಮೀಸಲಾತಿ : ನಮ್ಮ ಹೋರಾಟ ಬರೀ ಪಂಚಮಸಾಲಿ ಜನರಿಗೆ ಸೀಮಿತವಲ್ಲ

## ಹೊಸ ಹರ್ಲಾಪುರ ಬಸವೇಶ್ವರ ದೇವಸ್ಥಾನದ ನೂತನ ಕಟ್ಟಡ ಉದ್ಘಾಟನೆಯಲ್ಲಿ ಶ್ರೀ ಜಯ ಮೃತ್ಯುಂಜಯ ಸ್ವಾಮೀಜಿ



ಹರಿಹರ, ಫೆ.17- ಪಂಚಮಸಾಲಿ ಸಮಾಜಕ್ಕೆ 2-ಎ ಮೀಸಲಾತಿ ಸಿಕ್ಕರೆ, ಪಂಚಮಸಾಲಿ ಸಮಾಜ ವಲ್ಲದೇ ಗೌಳಿ ಲಿಂಗಾಯತರು ಸೇರಿದಂತೆ ಅನೇಕ ಒಳಪಂಗಡಗಳ ಜನರಿಗೆ ಸೌಲಭ್ಯ ದೊರೆಯುತ್ತದೆ. ಇದರಲ್ಲಿ ಯಾವುದೇ ಅನುಮಾನ ಬೇಡ ಎಂದು ಕೂಡಲ ಸಂಗಮದ ಪಂಚಮಸಾಲಿ ಗುರುಪೀಠದ ಜಗದ್ಗುರು ಶ್ರೀ ಜಯ ಮೃತ್ಯುಂಜಯ ಮಹಾಸ್ವಾಮೀಜಿ ಹೇಳಿದರು.

ಇಲ್ಲಿನ ಹೊಸ ಹರ್ಲಾಪುರ ಬಡಾವಣೆಯ ವೀರಶೈವ ಸಮಾಜದ ವತಿಯಿಂದ ನಡೆದ ಶ್ರೀ ಬಸವೇಶ್ವರ ದೇವಸ್ಥಾನದ ನೂತನ ಕಟ್ಟಡ ಉದ್ಘಾಟನೆ ಮತ್ತು ಕಳಸರೋಹಣ ಹಾಗೂ ಮೂರ್ತಿ ಪುನರ್ ಸ್ಥಾಪನೆಯ, ಧರ್ಮ ಜಾಗೃತಿ ವೇದಿಕೆ ಸಮಾರಂಭದ ಸಾನಿಧ್ಯವನ್ನು ವಹಿಸಿ ಅವರು ಮಾತನಾಡಿದರು.

ನಮ್ಮ ಸಮಾಜದ ಜನರನ್ನು ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಸಾಮಾಜಿಕವಾಗಿ, ರಾಜಕೀಯದಲ್ಲಿ ಮುನ್ನಲೆಗೆ ತರುವ ನಿಟ್ಟಿನಲ್ಲಿ ಹಲವಾರು ವರ್ಷಗಳ ಕಾಲ ಹೋರಾಟಕ್ಕೆ ಮುಂದಾಗಿದ್ದು, ಆದರೆ ನಮ್ಮ ಹೋರಾಟ ಕೇವಲ ಪಂಚಮಸಾಲಿ ಸಮಾಜದ ಜನರ ಒಳಿತಿಗಾಗಿ ಅಷ್ಟೇ ಅಲ್ಲದೇ, ನಾಡಿನಾದ್ಯಂತ ಇರುವಂತ ವೀರಶೈವ ಸಮಾಜದ ಹಲವಾರು ಒಳಪಂಗಡಗಳ ಒಳಿತಿಗಾಗಿ ಎಂದು ಹೇಳಿದರು.

ಲಿಂಗವಂತರು ನಾವೆಲ್ಲರೂ ಒಂದೇ ತಾಯಿಯ ಮಕ್ಕಳು ಎಂಬ ಭಾವನೆಗಳ ಅಡಿಯಲ್ಲಿ ಸಮಾಜವನ್ನು ಸದೃಢವಾಗಿ ಕಟ್ಟೋಣ ಎಂದರು.

ಹರಿಹರ ಪಂಚಮಸಾಲಿ ಗುರುಪೀಠ ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮಿಗಳು ಮಾತನಾಡಿ, ದೇವಸ್ಥಾನ ಜೀರ್ಣೋದ್ಧಾರ ಮಾಡುವುದಷ್ಟೇ ಅಲ್ಲದೇ ದೇವರ ಮೂರ್ತಿಗೆ ನಿರಂತರವಾಗಿ ಅಭಿಷೇಕ ಪೂಜೆ ಸಲ್ಲಿಸುವಂತಾದರೆ ಆ ದೇವಸ್ಥಾನದ ದೈವಿಕ ಶಕ್ತಿ ಪ್ರಕಾಶವಾಗಿ ಹೊಳೆಯುತ್ತದೆ ಎಂದು ಹೇಳಿದರು.

ದೇಶದ ಜನತೆಯ ವೈಶಿಷ್ಟ್ಯಗಳಲ್ಲಿ ಸಂಸ್ಕಾರ ಸಂಸ್ಕೃತಿ ಮತ್ತು ಅಧ್ಯಾತ್ಮಿಕತೆಯ ಒಲವು ಹೆಚ್ಚು ಪ್ರಾಮುಖ್ಯತೆಯನ್ನು ಹೊಂದಿದೆ. ಇದರಿಂದಾಗಿ ಭಕ್ತಿಗಿಂತ ಜಗತ್ತಿನಲ್ಲಿ ಮತ್ತ್ಯಾವುದು ಇರುವುದಿಲ್ಲ ಎಂಬುದನ್ನು ಸೂಚಿಸುತ್ತದೆ. ದೇವರುಗಳ ರೂಪಗಳು ಬೇರೆ ಬೇರೆಯಾಗಿ ಇರಬಹುದು. ಆದರೆ ಭಕ್ತಿ, ನಿಷ್ಠೆ, ಶ್ರದ್ಧೆ ಏಕದೇವರ ಮೇಲೆ ಇರುವಂತಾಗಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಮಾತನಾಡಿ, ಸರ್ಕಾರದಿಂದ ಒಂದು ರೂಪಾಯಿ ಧನ ಸಹಾಯವನ್ನೂ ಪಡೆಯದೇ 50 ಲಕ್ಷಕ್ಕೂ ಹೆಚ್ಚು ಹಣ ವೆಚ್ಚ ಮಾಡಿ ದೇವಸ್ಥಾನವನ್ನು ಅತ್ಯುತ್ತಮವಾಗಿ ಜೀರ್ಣೋದ್ಧಾರ ಮಾಡಿರುವುದು ಇಲ್ಲಿನ ಜನರ ಒಗ್ಗಟ್ಟು ಮತ್ತು ಭಕ್ತಿಯನ್ನು ತೋರಿಸುತ್ತದೆ ಎಂದು ಶ್ಲಾಘಿಸಿದರು.

ದೇವರ ಮೇಲೆ ಭಕ್ತಿಯನ್ನು ಹೆಚ್ಚು ಸಮರ್ಪಿಸಿದಷ್ಟು ಭಕ್ತರಿಗೆ ಹೆಚ್ಚು ಶಕ್ತಿ ವೃದ್ಧಿಯಾಗುತ್ತದೆ. 1998 ರಲ್ಲಿ ಹರಿಹರ ನಗರದಲ್ಲಿ ನಡೆದ ಯುಗಮಾನೋತ್ಸವ ಮತ್ತು ಪಂಚಪೀಠದ ಗುರುಗಳ ಅಡ್ಡಪಲ್ಲಕ್ಕಿ ಉತ್ಸವ ಈ ದೇವಸ್ಥಾನದ ಆವರಣದಿಂದಲೇ ಆರಂಭವಾದಂತಹ ಇತಿಹಾಸ ವನ್ನು ಹೊಂದಿದೆ ಎಂದು ಸ್ಮರಿಸಿದರು.

ದಾವಣಗೆರೆ ವಿರಕ್ತ ಮಠದ ಡಾ. ಶ್ರೀ ಬಸವಪ್ರಭು ಸ್ವಾಮೀಜಿ, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ವೀರಶೈವ ಸಮಾಜದ ತಾಲ್ಲೂಕು ಅಧ್ಯಕ್ಷ ಡಿ.ಜಿ. ಶಿವಾನಂದಪ್ಪ, ಹರ್ಲಾಪುರ ವೀರಶೈವ ಸಮಾಜದ ಅಧ್ಯಕ್ಷ ನಿಜಲಿಂಗಪ್ಪ, ಅಕ್ಕಿ ಆಲೂರಿನ ರಾಜಪ್ಪ ಇತರರು ಮಾತನಾಡಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡ ಗುತ್ತೂರು ಜಿ.ಬಿ. ಹಾಲೇಶ್ ಗೌಡ್ರು, ಮಾಜಿ ತಾಪಂ ಅಧ್ಯಕ್ಷ ಟಿ.ಜೆ. ಮುರುಗೇಶಪ್ಪ, ಬಿ.ಜೆ. ಶಿವರಾಜ್, ಹೆಚ್.ಎಂ. ಸಿದ್ದವೀರಪ್ಪ, ಎನ್.ಮಾರುತಿ, ಎನ್. ಶಿವಮೂರ್ತಿ, ಹೆಚ್. ಸಿದ್ದಪ್ಪ, ವಿ. ವೀರಭದ್ರಪ್ಪ, ದೊಡ್ಡಮನೆ ಬಸವರಾಜ್, ಜಿ. ಹಾಲಪ್ಪ ಗೌಡ್ರು, ಸಮಾಳ ಚಂದ್ರಶೇಖರಪ್ಪ, ವೀರಭದ್ರಪ್ಪ, ಎಸ್ ಜಯಣ್ಣ, ಕೆ. ಮಲ್ಲಿಕಾರ್ಜುನ, ಹೊಟೇಲ್ ಗಂಗಾಧರ್ ಶಿವಯೋಗಿಸ್ವಾಮಿ ಇಂಜಿನಿಯರ್, ಹರೀಶ್, ಕುಮಾರ್, ಪೊಲೀಸ್ ಮಹೇಶ್, ಶಿವಶಂಕರ್ ಅಬರಗಪ್ಪ, ಹೆಚ್.ಸಿ. ಕೀರ್ತಿ ಕುಮಾರ್, ಸರ್ಪಭೂಷಣ ಇತರರು ಹಾಜರಿದ್ದರು.

ಪ್ರಾರ್ಥನೆ ವಿದ್ಯಾವತಿ, ಸ್ವಾಗತ ಹೆಚ್.ಸಿ. ಕೀರ್ತಿ ಕುಮಾರ್, ನಿರೂಪಣೆ ಕೆ.ಸಿ. ಶಾಂತಕುಮಾರಿ ಮಾಡಿದರು.



## ಶಾಸಕ ಬಿ.ಪಿ.ಹರೀಶ್ ಪ್ರಯಾಗರಾಜ್‌ನಲ್ಲಿ ಪುಣ್ಯಸ್ನಾನ

ಹರಿಹರ, ಫೆ,17- ಉತ್ತರ ಪ್ರದೇಶದ ಪ್ರಯಾಗರಾಜ್‌ನಲ್ಲಿ 144 ವರ್ಷಕ್ಕೊಮ್ಮೆ ನಡೆಯುತ್ತಿರುವ ಕುಂಭ ಮೇಳದಲ್ಲಿ ಗಂಗಾ, ಯಮುನಾ, ಸರಸ್ವತಿ ಮೂರು ನದಿಗಳು ಒಂದಾಗಿರುವ ತ್ರಿವೇಣಿ ಸಂಗಮದಲ್ಲಿ ಶಾಸಕ ಬಿ.ಪಿ. ಹರೀಶ್ ಅವರು ತಮ್ಮ ಆತ್ಮೀಯರೊಂದಿಗೆ ಪುಣ್ಯ ಸ್ನಾನ ಮಾಡುವ ಮೂಲಕ ಭಕ್ತಿಯನ್ನು ಸಮರ್ಪಿಸಿ, ಅಘೋರಿ ಬಾಬಾರವರು ಮತ್ತು ಋಷಿಮುನಿಗಳ ಆಶೀರ್ವಾದ ಪಡೆದುಕೊಂಡರು.

# ಹರಿಹರದಲ್ಲಿ ಇಂದು ಶ್ರೀ ಊರಮ್ಮ ದೇವಿ ಮೂರ್ತಿ ಪ್ರಾಣ ಪ್ರತಿಷ್ಠಾಪನೆ




ಹರಿಹರ, ಫೆ.17- ಇಲ್ಲಿನ ಇಂದಿರಾ ನಗರ ಬಡಾವಣೆಯ ಶ್ರೀ ಗ್ರಾಮದೇವತೆ ಊರಮ್ಮ ದೇವಿ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮವನ್ನು ನಾಳೆ 18ರ ಮಂಗಳವಾರ ಹಮ್ಮಿಕೊಳ್ಳಲಾಗಿದೆ ಎಂದು ಮಂಜುನಾಥ್ ಚಿಂಚಲಿ, ನಗರಸಭೆ ಅಧ್ಯಕ್ಷರಾದ ಕವಿತಾ ಮಾರುತಿ ಬೇಡರ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಕಳೆದ 38 ವರ್ಷದ ಹಿಂದೆ ಸ್ಥಾಪನೆ ಆಗಿರುವ ದೇವಸ್ಥಾನದ ಗರ್ಭ ಗುಡಿಯಲ್ಲಿ ಕಳಸವನ್ನು ಇಟ್ಟು ಪೂಜೆ ಸಲ್ಲಿಸುತ್ತಾ ಬರಲಾಗಿತ್ತು. ಆದರೆ ಇತ್ತೀಚೆಗೆ ಬಡಾವಣೆಯ ಹಿರಿಯರು ಮತ್ತು ಯುವಕರು ಸಮಾಲೋಚನೆ ನಡೆಸಿ ಶಿಲಾ ಮೂರ್ತಿಯನ್ನು ಸ್ಥಾಪನೆ ಮಾಡುವ ತೀರ್ಮಾನ ತೆಗೆದುಕೊಳ್ಳುವ ಮೂಲಕ ಸುಮಾರು 1.5 ಲಕ್ಷ ರೂ.ಗಳ ವೆಚ್ಚದಲ್ಲಿ ಶಿಲಾ ಮೂರ್ತಿಯನ್ನು ನಿರ್ಮಿಸಲಾಗಿದ್ದು, ಪ್ರಾಣ ಪ್ರತಿಷ್ಠಾಪನೆ ಕಾರ್ಯ ನಾಳೆ ಮಂಗಳವಾರ ಬೆಳಿಗ್ಗೆ 6 -30 ಕ್ಕೆ ಹರಪನಹಳ್ಳಿ ತೆಗ್ಗಿನಮಠದ ಪಟ್ಟಾಧ್ಯಕ್ಷರಾದ ಶ್ರೀ ವರಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಕಸಬಾ ಗೌಡ್ರು ಲಿಂಗಾರಾಜ್ ಪಾಟೀಲ್, ಮಾಜೇನಹಳ್ಳಿ ಗೌಡ್ರು ಚನ್ನಬಸಪ್ಪ, ಬಣಕಾರ ಆಂಜನೇಯ, ಸಿದ್ದಪ್ಪ, ಶಾನಭೋಗರು ಗಿರೀಶ್, ಗ್ರಾಮದೇವತೆ ಉತ್ಸವ 2025 ನೇ ಸಾಲಿನ ಸಮಿತಿಯ ಅಧ್ಯಕ್ಷ ಹಾರ್ನಳ್ಳಿ ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಗಿರೀಶ್ ಗೌಡ್ರು, ಖಜಾಂಚಿ ಕೆಂಚಪ್ಪ ದೊಡ್ಡಮನೆ, ಸಹ ಕಾರ್ಯದರ್ಶಿ ಸಿದ್ದಪ್ಪ, ಹಾಗೂ ಕಾರ್ಯಕಾರಿ ಸಮಿತಿಯವರ ಸಮ್ಮುಖದಲ್ಲಿ ಪೂಜಾ ಕಾರ್ಯಕ್ರಮಗಳನ್ನು ನೇರವೇರಿಸಲಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮಕ್ಕೆ ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕರಾದ ಹೆಚ್.ಎಸ್. ಶಿವಶಂಕರ್, ಎಸ್.ರಾಮಪ್ಪ, ಬಿಜೆಪಿ ಪಕ್ಷದ ಮುಖಂಡ ಚಂದ್ರಶೇಖರ್ ಪೂಜಾರ್, ಮಾಜಿ ಜಿಪಂ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ಕಾಂಗ್ರೆಸ್ ಪಕ್ಷದ ಮುಖಂಡ ನಂದಿಗಾವಿ ಶ್ರೀನಿವಾಸ್, ನಗರಸಭೆಯ ಅಧ್ಯಕ್ಷೆ ಕವಿತಾ ಮಾರುತಿ ಬೇಡರ್, ಉಪಾಧ್ಯಕ್ಷ ಜಂಬಣ್ಣ ಗುತ್ತೂರು ಮತ್ತಿತರರು ಆಗಮಿಸು ತ್ತಾರೆ ಎಂದು ಜಿ.ಹೆಚ್. ಕೃಷ್ಣಮೂರ್ತಿ ತಿಳಿಸಿದರು.

ಈ ಸಂದರ್ಭದಲ್ಲಿ ಮಾರುತಿ ವಕೀಲರು, ಜೆ ಪ್ರದೀಪ್, ಎಂ. ಟಿಕೋಜಿರಾವ್, ಇತರರು ಹಾಜರಿದ್ದರು.

## ಲೋಕ ಅದಾಲತ್ : ನಗರದಲ್ಲಿ ಇಂದು ಸಭೆ

ಮಾರ್ಚ್ 8ರಂದು ರಂದು ಜರುಗಲಿರುವ ರಾಷ್ಟ್ರೀಯ ಲೋಕ ಅದಾಲತ್ ಬಗ್ಗೆ ಪೂರ್ವಭಾವಿ ಸಭೆಯನ್ನು ಜಿಲ್ಲಾ ವಕೀಲರ ಸಭಾಭವನದಲ್ಲಿ ಇಂದು ಏರ್ಪಡಿಸಲಾಗಿದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ ಅವರು, ರಾಷ್ಟ್ರೀಯ ಲೋಕ ದಾಲತ್‌ನಲ್ಲಿ ವಕೀಲರ ಮತ್ತು ಸಾರ್ವಜನಿಕರ ಪಾತ್ರದ ಬಗ್ಗೆ ಮಾತನಾಡಲಿದ್ದಾರೆ.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ. ಕರೆಣ್ಣವರ ಹಾಗೂ ಇತರೆ ನ್ಯಾಯಾಧೀಶರು ಭಾಗವಹಿಸಲಿದ್ದಾರೆ. ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಅರುಣಕುಮಾರ್ ಎಲ್. ಎಚ್. ಮತ್ತು ಇತರರು ಉಪಸ್ಥಿತರಿರುವರು.

## ನಗರಕ್ಕೆ ಇಂದು ಇಂಧನ ಸಚಿವ ಜಾರ್ಜ್

ಇಂಧನ ಸಚಿವ ಕೆ.ಜೆ.ಜಾರ್ಜ್ ಅವರು ಇಂದು ನಗರಕ್ಕೆ ಆಗಮಿಸಲಿದ್ದಾರೆ.

ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಗೆ ಭೇಟಿ ನೀಡುವ ಸಚಿವರು, ಪಕ್ಷದ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡುವರು ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ. ನಂತರ ಬೆಳಿಗ್ಗೆ 11 ಗಂಟೆಗೆ ಜಿ.ಪಂ. ಸಭಾಂಗಣದಲ್ಲಿ ಇಂಧನ ಇಲಾಖೆಯ ವಿಷಯಗಳ ಕುರಿತು ಚರ್ಚಿಸಲು ಜಿಲ್ಲೆಯ ಎಲ್ಲಾ ಚುನಾಯಿತ ಜನ ಪ್ರತಿನಿಧಿಗಳೊಂದಿಗೆ ಸಭೆ ನಡೆಸುವರು.

# ಹರಪನಹಳ್ಳಿ ತಾಲ್ಲೂಕಿಗೆ ಕೆಎಸ್ಸಾರ್ಟಿಸಿ 11 ಬಸ್



ಹರಪನಹಳ್ಳಿ, ಫೆ. 17 - ತಾಲ್ಲೂಕಿನ ಸಾರ್ವಜನಿಕರು ಹಾಗೂ ಶಾಲಾ ಮಕ್ಕಳಿಗೆ ಅನುಕೂಲವಾಗುವ ಉದ್ದೇಶದಿಂದ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ 11 ಬಸ್ ನೀಡಲಾಗಿದೆ ಎಂದು ಶಾಸಕರಾದ ಶ್ರೀಮತಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ಹರ್ಷ ವ್ಯಕ್ತ ಪಡಿಸಿದರು.

ಪಟ್ಟಣದ ಐ.ಬಿ. ವೃತ್ತದಲ್ಲಿ ನೂತನ 11 ಬಸ್‌ಗಳಿಗೆ ಚಾಲನೆ, 250 ಜನ ಆಶಾ ಕಾರ್ಯಕರ್ತೆಯರಿಗೆ ಉಚಿತ ಸಮವಸ್ತ್ರ ವಿತರಣೆ, ದೇವರಾಜು ಅರಸು ಅಭಿವೃದ್ಧಿ ಯೋಜನೆಯಡಿ 25 ಜನ ಮಹಿಳೆಯರಿಗೆ ಹೊಲಿಗೆ ಯಂತ್ರ ವಿತರಣೆ, ಪರಿಶಿಷ್ಠ ಪಂಗಡದ ಪ್ರತಿಭಾವಂತ ವಿಧ್ಯಾರ್ಥಿಗಳಿಗೆ ಸಹಾಯಧನ ಚೆಕ್ ವಿತರಣಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಹರಪನಹಳ್ಳಿಯು 371ಜೆ ಕಲ್ಯಾಣ ಕರ್ನಾಟಕ ವ್ಯಾಪ್ತಿಯಡಿ, ಸೇರ್ಪಡೆಗೊಂಡು ನಂತರ ಶೈಕ್ಷಣಿಕವಾಗಿ ಅತಿ ಹೆಚ್ಚು ಮಕ್ಕಳು ಮುಂದುವರೆಯುತ್ತಿರುವುದು ಸಂತಸದ ಸಂಗತಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಕಲಿಕೆಗೆ ಯಾವುದೆ ತೊಂದರೆ ಉಂಟಾಗದೆ ಶಿಕ್ಷಣ ಮುಂದುವರೆಸಲು ಸಾರಿಗೆ ಸೌಕರ್ಯ ಅತ್ಯಗತ್ಯವೆಂದರು.

> ಶಾಸಕರಾದ ಲತಾ ಮಲ್ಲಿಕಾರ್ಜುನ್ ಅವರ ಇಚ್ಛಾಶಕ್ತಿಯಿಂದ ನೀಡಿರುವ 11 ಬಸ್‌ಗಳಿಂದ 286 ಹಳ್ಳಿಗಳ ಗ್ರಾಮಸ್ಥರಿಗೆ ಅನುಕೂಲ.
>
> **- ರಾಜಪ್ಪ,**
> ವ್ಯವಸ್ಥಾಪಕ ನಿರ್ದೇಶಕರು, ಕೆಎಸ್ಸಾರ್ಟಿಸಿ

ವಿದ್ಯಾರ್ಥಿಗಳು ಅಷ್ಟೇ ಅಲ್ಲದೇ ಗ್ರಾಮೀಣ ಪ್ರದೇಶದಿಂದ ಪಟ್ಟಣಕ್ಕೆ ಬರುವ ಕೂಲಿ ಕಾರ್ಮಿಕರಿಗೆ ಶಕ್ತಿ ಯೋಜನೆಯಿಂದ ಸಾಕಷ್ಟು ಅನುಕೂಲವಾಗಿದೆ. ಅದರಂತೆ ಪಟ್ಟಣದ ಜನತೆಗೆ ಇನ್ನೂ ಮೂರು, ನಾಲ್ಕು ತಿಂಗಳೊಳಗೆ ನೂತನ ಸಿಟಿ ಬಸ್ ಸೌಕರ್ಯ ಒದಗಿಸಲಾಗವುದು.

ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ರಾಜಪ್ಪ ಮಾತನಾಡಿ, ಶಾಸಕರ ಇಚ್ಛಾಶಕ್ತಿಯಿಂದ ಇಂದು ತಾಲ್ಲೂಕಿಗೆ ನೂತನ ಬಸ್‌ಗಳು ಬಿಡುತ್ತಿದ್ದೇವೆ, ತಾಲ್ಲೂಕಿನ 286 ಹಳ್ಳಿಗಳಿಗೆ ಇದುವರೆಗೆ ಸಾರಿಗೆ ವ್ಯವಸ್ಥೆ ಅಸ್ತವ್ಯಸ್ಥವಾಗಿತ್ತು. ನೂತನ ಬಸ್‌ಗಳ ಆಗಮನದಿಂದ ತೊಂದರೆ ನಿವಾರಣೆಯಾಗಿದೆ, ರಾಜ್ಯದಲ್ಲಿ ಶಕ್ತಿ ಯೋಜನೆಯಿಂದ ಕೆ.ಎಸ್. ಆರ್. ಟಿ.ಸಿ. ನಿಗಮಕ್ಕೆ ಉಸಿರು ಬಂದಂತಾಗಿದೆ, ನಿಗಮಕ್ಕೆ ಯಾವುದೇ ನಷ್ಟವಿಲ್ಲ ಜನರ ಊಹಾಪೋಹಗಳಿಗೆ ಕಿವಿಗೊಡಬೇಡಿ ಎಂದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾಧ್ಯಕ್ಷ ಶಿವಮೂರ್ತಿ ಮಾತನಾಡಿ, ರಾಜ್ಯ ಪಂಚಗ್ಯಾರಂಟಿ ಯೋಜನೆಗಳಿಂದ ಎಲ್ಲಾ ವರ್ಗದ ಜನತೆಯು ನೆಮ್ಮದಿಯಿಂದ ಜೀವಿಸುತ್ತಿದ್ದಾರೆ. ಇದಕ್ಕೆ ಮೂಲ ಕಾರಣ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಬದ್ದತೆಯೆ ಕಾರಣವಾಗಿದೆ ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ. ಅಂಜಿನಪ್ಪ ಕುಬೇರ ಗೌಡ, ಗ್ಯಾರಂಟಿ ಅನುಷ್ಠಾನ ಯೋಜನೆಯ ಜಿಲ್ಲಾ ಸಮಿತಿಯ ಅಧ್ಯಕ್ಷ ಶಿವಮೂರ್ತಿ ಮಾತನಾಡಿದರು.

ಸಾರಿಗೆ ನಿಗಮದ ಡಿಸಿ ತಿಮ್ಮಾರೆಡ್ಡಿ, ತಹಶೀಲ್ದಾರ್ ಬಿ.ವಿ. ಗಿರೀಶ್ ಬಾಬು, ಡಿಪೋ ವ್ಯವಸ್ಥಾಪಕರಾದ ಮಂಜುಳಾ, ಪುರಸಭೆ ಅಧ್ಯಕ್ಷೆ ಫಾತೀಮಾ ಬಿ, ಉಪಾಧ್ಯಕ್ಷ ಎಚ್. ಕೊಟ್ರೇಶ್, ಪುರಸಭೆ ಅಧ್ಯಕ್ಷ ಪಾತೀಮ ಶೇಕ್ಷಾವಲಿ ಸದಸ್ಯರುಗಳಾದ ಟಿ. ವೆಂಕಟೇಶ, ಡಿ. ಅಬ್ದುಲ್, ರಹಮಾನ್ ಸಾಬ್, ಉದ್ದಾರ್ ಗಣೇಶ, ಜಾಕೀರ್ ಸರ್ಕವಾಸ್, ಲಾಟಿ ದಾದಪೀರ್ ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ್, ಬಿಇಓ ಹೆಚ್ ಲೇಪಾಕ್ಷಪ್ಪ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲ್ಲೂಕು ಅಧ್ಯಕ್ಷ ಉದಯಶಂಕರ್, ಹಾಗೂ ಇತರರಿದ್ದರು.

## ಹಿರೇಹಡಗಲಿ : ಅಪರಿಚಿತನ ಶವ ಪತ್ತೆ

ದಾವಣಗೆರೆ, ಫೆ. 17 - ಹಿರೇಹಡಗಲಿ ಪೊಲೀಸ್ ಠಾಣೆಯ ವಾಪ್ತಿಯ ಮೈಲಾರ ಜಾತ್ರೆಯಲ್ಲಿ ಫೆ.13 ರಂದು ಸುಮಾರು 50 ರಿಂದ 55 ವಯಸ್ಸಿನ ಅನಾಮಧೇಯ ವ್ಯಕ್ತಿಯೊಬ್ಬನ ಮೃತ ದೇಹ ದೊರೆತಿದೆ.

ಸಾಧಾರಣ ಮೈಕಟ್ಟು, ಎಣ್ಣೆಗೆಂಪು ಮೈ ಬಣ್ಣದವನಾಗಿದ್ದು, ತಲೆಯಲ್ಲಿ 1 ಇಂಚು ಕಪ್ಪು ಮತ್ತು ಬಿಳಿ ಮಿಶ್ರಿತ ಕೂದಲು ಇರುತ್ತದೆ. ಸಂಬಂಧಪಟ್ಟವರು ಹಿರೇಹಡಗಲಿ ಪೊಲೀಸ್ ಠಾಣೆಗೆ ಅಥವಾ ವಿಜಯನಗರ ಜಿಲ್ಲಾ ಕಂಟ್ರೋಲ್‌ಗೆ 08394-200202, 9480805700 ಗೆ ತಿಳಿಸಬಹುದು.

## ತೋಳಹುಣಸೆ ಬಳಿ ಅಪರಿಚಿತನ ಶವ ಪತ್ತೆ

ದಾವಣಗೆರೆ, ಫೆ.17- ದಾವಣಗೆರೆ ಮತ್ತು ತೋಳಹುಣಸೆ ರೈಲ್ವೆ ನಿಲ್ದಾಣದ ಮಧ್ಯೆ ಅಪರಿಚಿತ ಗಂಡಸಿನ ಮೃತ ದೇಹ ಪತ್ತೆಯಾಗಿದೆ.

55 ರಿಂದ 60 ವರ್ಷ, ಕಪ್ಪು ಮೈ ಬಣ್ಣ, ಸಾಧಾರಣ ಮೈ ಕಟ್ಟು, ದುಂಡು ಮುಖ ಮತ್ತು ಉದ್ದನೆಯ ಬಿಳಿ ಕೂದಲು ಹಾಗೂ ಬಿಳಿ ಬಣ್ಣದ ತುಂಬು ತೋಳಿನ ಪೈಜಾಮ್ ಮತ್ತು ಹಸಿರು ಬಣ್ಣದ ಪಟ್ಟಿಯುಳ್ಳ ಲುಂಗಿ ಧರಿಸಿರುತ್ತಾನೆ.

ಸಂಬಂಧಪಟ್ಟವರು ಸಂಪರ್ಕಿಸುವ ದೂರವಾಣಿ 08192-259643, 9480802123 ಅಥವಾ 080-22871291.

## ಚಿತ್ರದುರ್ಗ : ಅಪರಿಚಿತನ ಶವ ಪತ್ತೆ

ಚಿತ್ರದುರ್ಗ, ಫೆ.17- ಚಿತ್ರದುರ್ಗ ಮತ್ತು ಹಳಿಯೂರು ರೈಲು ನಿಲ್ದಾಣಗಳ ಮಧ್ಯೆ ಅನಾಮಿಕ ಶವ ಪತ್ತೆಯಾಗಿದೆ. ಅಂದಾಜು 41ರಿಂದ 45 ವರ್ಷದ ಈತ, ಕಪ್ಪು ಮೈ ಬಣ್ಣ, ಸಾಧಾರಣ ಮೈ ಕಟ್ಟು, ಕೋಲು ಮುಖ ಮತ್ತು ಬಿಳಿ ಮಿಶ್ರಿತ ಕಪ್ಪು ಕೂದಲು ಹಾಗೂ ತುಂಬು ತೋಳಿನ ಪಿಂಕ್ ಬಣ್ಣದ ಪ್ಲೇನ್ ಶರ್ಟ್ ಧರಿಸಿರುತ್ತಾನೆ. ಸಂಬಂಧಪಟ್ಟವರು ಸಂಪರ್ಕಿಸಬಹುದಾದ ದೂರವಾಣಿ : 08192-259643, 9480802123 ಅಥವಾ 080-22871291.

## ಷಟಲ್ ಬ್ಯಾಡ್ಮಿಂಟನ್ : ಆನಗೋಡಿನ ವಿದ್ಯಾರ್ಥಿಗಳಿಗೆ ಬಹುಮಾನ



ಭರಮಸಾಗರ, ಫೆ. 17- ತರಳಬಾಳು ಹುಣ್ಣಿಮೆ ಮಹೋತ್ಸವದ ಪ್ರಯುಕ್ತ ಭರಮಸಾಗರದಲ್ಲಿ ನಡೆದ ಕ್ರೀಡಾಕೂಟದಲ್ಲಿ ಜಿ. ಚೆನ್ನಪ್ಪ ಪದವಿಪೂರ್ವ ಕಾಲೇಜು ಆನಗೋಡಿನ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಷಟಲ್ ಬ್ಯಾಡ್ಮಿಂಟನ್ ಕ್ರೀಡೆಯಲ್ಲಿ ಭಾಗವಹಿಸಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಗಳಿಸಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ.

## ಹರಿಹರ ಬಳಿ ಅಪರಿಚಿತನ ಶವ ಪತ್ತೆ

ದಾವಣಗೆರೆ, ಫೆ.17- ಹರಿಹರ ಮತ್ತು ಕುಮಾರಪಟ್ಟಣಂ ರೈಲ್ವೆ ನಿಲ್ದಾಣದ ಮಧ್ಯೆ ಅಪರಿಚಿತ ಗಂಡಸಿನ ಮೃತ ದೇಹ ಪತ್ತೆಯಾಗಿದೆ.

ಅಂದಾಜು 35ರಿಂದ 40 ವರ್ಷ, 5.5 ಅಡಿ ಎತ್ತರ, ಗೋಧಿ ಮೈ ಬಣ್ಣ, ಸಾಧಾರಣ ಮೈ ಕಟ್ಟು, ದುಂಡು ಮುಖ ಮತ್ತು ಕುರುಚಲು ಮೀಸೆ ಮತ್ತು ಗಡ್ಡ ಬಿಟ್ಟಿರುವ ಚಹರೆಯನ್ನು ಮೃತ ವ್ಯಕ್ತಿ ಹೊಂದಿದ್ದಾನೆ. ಸಂಬಂಧಪಟ್ಟವರು ಸಂಪರ್ಕಿಸಬಹುದಾದ ದೂರವಾಣಿ : 08192-259643, 9480802123 ಅಥವಾ 080-22871291.

## ಡಿಪ್ಲೋಮಾ ವಿದ್ಯಾರ್ಥಿಗಳ ಸಾಧನೆ : ಸಾಧನೆ ನಿರಂತರವಾಗಿರಲಿ - ಡಾ. ಪ್ರಭಾ



ದಾವಣಗೆರೆ, ಫೆ. 17 - ನಗರದ ಬಾಪೂಜಿ ಡಿಪ್ಲೋಮಾ ಕಾಲೇಜಿನ ಸಿಎಸ್ ವಿಭಾಗದ ವಿದ್ಯಾರ್ಥಿಗಳು ಈ ಬಾರಿಯ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದಿದ್ದು ತಮ್ಮ ಸಂಸತಸವನ್ನು ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರೊಂದಿಗೆ ಹಂಚಿಕೊಂಡಿದ್ದಾರೆ.

ಸಂಸದರ ಗೃಹ ಕಚೇರಿಯಲ್ಲಿ ಭೇಟಿಯಾದ ವಿದ್ಯಾರ್ಥಿಗಳು, ತಮ್ಮ ವಿದ್ಯಾಭ್ಯಾಸ ಹಾಗೂ ಸಾಧನೆಗಳ ಕುರಿತು ಸಂಸದರೊಂದಿಗೆ ಮುಕ್ತವಾಗಿ ಮಾತನಾಡಿದರು.

ಅದರಲ್ಲೂ ವಿದ್ಯಾರ್ಥಿಯೊಬ್ಬರು ಈ ಬಾರಿಯ ಪರೀಕ್ಷೆಯಲ್ಲಿ ಶೇ. 98 ರಷ್ಟು ಅಂಕ ಪಡೆದಿದ್ದಾರೆ. ಈ ವೇಳೆ ಮಾತನಾಡಿದ ಸಂಸದರು, ವಿದ್ಯಾರ್ಥಿಗಳ ಸಾಧನೆ ನಿರಂತರವಾಗಿರಲಿ ಎಂದು ಮಕ್ಕಳಿಗೆ ಶುಭ ಹಾರೈಸಿದರು.

## ಮೇ ನಂತರ ಜಿ.ಪಂ, ತಾ.ಪಂ ಚುನಾವಣೆಗೆ ಸರ್ಕಾರ ಸಿದ್ಧ

(1ನೇ ಪುಟದಿಂದ) ಪಣೀಂದ್ರ ನ್ಯಾಯಾಲಯಕ್ಕೆ ತಿಳಿಸಿದರು. ಇದಕ್ಕೆ ಉತ್ತರ ನೀಡಿದ ಅಡ್ವೋಕೇಟ್ ಜನರಲ್ ಅವರು, ಮೇ ತಿಂಗಳೊಳಗಾಗಿ ಮೀಸಲಾತಿ ಪಟ್ಟಿಯನ್ನು ಆಯೋಗಕ್ಕೆ ಒದಗಿಸ ಲಾಗುವುದು.


ಜೂನ್ ಅಥವಾ ಜುಲೈನಲ್ಲಿ ಆಯೋಗ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸ ಬಹುದಾಗಿದೆ ಎಂದು ನೀಡಿದ ಹೇಳಿಕೆಯನ್ನು ನ್ಯಾಯಮೂರ್ತಿಗಳು ದಾಖ ಲಿಸಿಕೊಂಡು ಅರ್ಜಿ ಇತ್ಯರ್ಥಪಡಿಸಿದರು. ಈ ಮಧ್ಯೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಸುದ್ದಿಗಾರರೊಂದಿಗೆ ಮಾತನಾಡಿ, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್ ಚುನಾವಣೆ ನಡೆಸಲು ಸರ್ಕಾರ ಸಿದ್ಧ ಎಂದಿದ್ದಾರೆ.

ನ್ಯಾಯಾಲಯಕ್ಕೆ ಸರ್ಕಾರ ಚುನಾವಣೆ ನಡೆಸುವ ವಾಗ್ದಾನ ನೀಡಲಿದೆ ಎಂಬುದನ್ನು ಮೊದಲೇ ಅರಿತ, ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ನಿನ್ನೆ ಪಕ್ಷದ ಕಚೇರಿಯಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಿದ್ಧರಾಗುವಂತೆ ಕಾರ್ಯಕರ್ತರಿಗೆ ಕರೆ ನೀಡಿದ್ದರು.

ಜಿಲ್ಲಾ, ತಾಲ್ಲೂಕು ಪಂಚಾಯತ್ ಅಲ್ಲದೆ, ಬೆಂಗಳೂರು ಮಹಾನಗರ ಪಾಲಿಕೆ ಸೇರಿದಂತೆ ಉಳಿದ ಪಾಲಿಕೆಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೂ ಚುನಾವಣೆ ನಡೆಸಲು ಸರ್ಕಾರ ನಿರ್ಧರಿಸಿದೆ ಎಂದು ಶಿವಕುಮಾರ್ ಇದೇ ಸಂದರ್ಭದಲ್ಲಿ ತಿಳಿಸಿದ್ದರು.

ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದ ವೇಳೆ, ಸ್ಥಳೀಯ ಸಂಸ್ಥೆಗಳ ಅವಧಿ ಪೂರ್ಣಗೊಂಡಿದ್ದು ಚುನಾವಣೆ ನಡೆಸಬೇಕಿತ್ತು, ಆದರೆ, ಮೀಸಲಾತಿ ನಿಗದಿ ಗೊಂದಲವನ್ನು ಅಂದಿನ ಸರ್ಕಾರ ಹಾಗೂ ನಂತರದ ಸಿದ್ದರಾಮಯ್ಯ ಸರ್ಕಾರ ಪರಿಹರಿಸಿರಲಿಲ್ಲ. ಮೀಸಲಾತಿ ಪಟ್ಟಿ ನೀಡದೆ ಚುನಾವಣೆ ನಡೆಸಲು ಆಯೋಗದಿಂದ ಸಾಧ್ಯವಾಗದ ಕಾರಣ ಸರ್ಕಾರದ ವಿರುದ್ಧ ಆಯೋಗ ನ್ಯಾಯಾಂಗನಿಂದನೆ ಅರ್ಜಿ ದಾಖಲಿಸಿತ್ತು.


**ಎಲೆಬೇತೂರು ವಡ್ಡನಹಳ್ಳಿ ವಿಜಯಕುಮಾರ್ ನಿಧನ**



ದಾವಣಗೆರೆ ತಾಲ್ಲೂಕು ಎಲೆಬೇತೂರು ಗ್ರಾಮದ
ವಡ್ಡನಹಳ್ಳಿ ಬಸವಂತಪ್ಪ ಇವರ ಪುತ್ರ
**ವಡ್ಡನಹಳ್ಳಿ ವಿಜಯಕುಮಾರ್** (47 ವರ್ಷ)
ಇವರು ದಿನಾಂಕ 17.02.2025ರ ಸೋಮವಾರ ರಾತ್ರಿ 10.30ಕ್ಕೆ ನಿಧನರಾದರು. ತಂದೆ, ಪತ್ನಿ, ಓರ್ವ ಪುತ್ರ, ಸಹೋದರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 18.02.2025ರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಎಲೆಬೇತೂರು ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಲಿದೆ.
ವಡ್ಡನಹಳ್ಳಿ ವಂಶಸ್ಥರು, ಎಲೆಬೇತೂರು, ಮೊ. : 73534 23560, 73530 67171



**ಚಿರಸ್ಮರಣೆ**



**ದಿ|| ಕೆ.ರಾಮಚಂದ್ರರಾವ್**
ನೀವು ನಮ್ಮನ್ನಗಲಿ ದಿ. 17-2-2024ಕ್ಕೆ 12 ವರ್ಷಗಳಾದವು. ಸದಾ ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ.
ನಿಮ್ಮ ಮಾರ್ಗದರ್ಶನದಲ್ಲೇ ನಡೆಯುತ್ತಿರುವ...
**ಪುತ್ರ, 6 ಜನ ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು, ಗಂಡಗಾಳೆ ಬಂಧುಗಳು, ಹುಲಗಿ ಸ್ಟುಡಿಯೋ ಮತ್ತು ಹುಲಗಿ ಎಂಟರ್ ಪ್ರೈಸಸ್, ನಿಜಲಿಂಗಪ್ಪ ಬಡಾವಣೆ, ದಾವಣಗೆರೆ.**


# ಆರ್ಥಿಕ ಚಟುವಟಿಕೆಗಳಲ್ಲಿ ದೇವಾಲಯಗಳು ಪ್ರಥಮ

ತಿರುಪತಿ, ಫೆ. 17 - ದೇಶದ ದೇವಾಲಯ ಆರ್ಥಿಕತೆಯ ಮೌಲ್ಯ 6 ಲಕ್ಷ ಕೋಟಿ ರೂ. ಆಗಿದೆ. ಇದೇ ದೇಶದ ಅತಿ ದೊಡ್ಡ ಆರ್ಥಿಕ ಚಟುವಟಿಕೆ ಎಂದು ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಹೇಳಿದ್ದಾರೆ.

ಇಂಟರ್‌ನ್ಯಾಷನಲ್ ಟೆಂಪಲ್ಸ್ ಕನ್ವೆನ್ಷನ್ ಅಂಡ್ ಎಕ್ಸ್‌ಪೋ (ಐಟಿಸಿಎಕ್ಸ್) ಕಾರ್ಯಕ್ರಮದಲ್ಲಿ ಮಾತನಾಡಿದ ನಾಯ್ಡು, ದೇವಾಲಯ ಆರ್ಥಿಕತೆಯಲ್ಲಿ ವರ್ಷವಿಡೀ ಚಟುವಟಿಕೆಗಳು ನಡೆಯುತ್ತವೆ ಎಂದಿದ್ದಾರೆ.

ಭಾರತದ ದೇವಾಲಯ ಆರ್ಥಿಕತೆ ಮೌಲ್ಯ 6 ಲಕ್ಷ ಕೋಟಿ ರೂ. ಆಗಿದೆ. ದೇಶದ ಬೇರೆ ಯಾವುದೇ ಆರ್ಥಿಕ ಚಟುವಟಿಕೆಗೆ ಹೋಲಿಸಿದರೂ ಇದು ಅತಿ ದೊಡ್ಡದಾಗಿದೆ.

> **ದೇವಾಲಯ ಆರ್ಥಿಕತೆ ಮೌಲ್ಯ 6 ಲಕ್ಷ ಕೋಟಿ ರೂ.: ಮುಖ್ಯಮಂತ್ರಿ ನಾಯ್ಡು**

ವರ್ಷದ 365 ದಿನಗಳಲ್ಲೂ ದೇವಾಲಯಗಳಲ್ಲಿ ದರ್ಶನ ಹಾಗೂ ದೇವಾಲಯ ನಗರಗಳಲ್ಲಿ ಚಟುವಟಿಕೆಗಳು ನಡೆಯುತ್ತವೆ. ಇದು ಅತಿ ದೊಡ್ಡ ಚಟುವಟಿಕೆಯಾಗಿದೆ. ಇದರಲ್ಲಿ ನಾವೆಲ್ಲರೂ ಭಾಗಿಯಾಗಿದ್ದೇವೆ ಎಂದು ನಾಯ್ಡು ಹೇಳಿದ್ದಾರೆ.

ಭಕ್ತರು ನಿರ್ದಿಷ್ಟ ಕಾರಣಕ್ಕಾಗಿ ದೇವಾಲಯಗಳಲ್ಲಿ ದೇಣಿಗೆ ನೀಡುತ್ತಾರೆ. ಈ ಹಣವನ್ನು ಅವರ ಆಶಯಗಳಿಗೆ ಅನುಗುಣವಾಗಿ ಬಳಸಬೇಕು ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ಟೆಂಪಲ್ ಎಕ್ಸ್‌ಪೋ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ನಾಯ್ಡು, ಈ ವೇದಿಕೆಯು ಕೃತಕ ಬುದ್ಧಿವಂತಿಕೆಯ ಅಳವಡಿಕೆ, ಉನ್ನತ ತಂತ್ರಜ್ಞಾನದ ಪರಿಹಾರ, ನೈತಿಕ ದಾನ, ಸುಸ್ಥಿರತೆ, ಸುರಕ್ಷತೆ, ಗುಂಪು ನಿರ್ವಹಣೆ ಹಾಗೂ ಹಣಕಾಸು ಪಾರದರ್ಶಕತೆಗೆ ಒತ್ತು ನೀಡಿದೆ ಎಂದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ವಿಕಸಿತ ಭಾರತ ದೃಷ್ಟಿಕೋನದ ರೀತಿಯಲ್ಲಿ ದೇವಾಲಯದ ಆಡಳಿತ ಹಾಗೂ ಆರ್ಥಿಕ ಬೆಳವಣಿಗೆ ಮತ್ತು ಜಾಗತಿಕ ದೇವಾಲಯ ಸಹಭಾಗಿತ್ವಕ್ಕೆ ಐಟಿಸಿಎಕ್ಸ್ ಆದ್ಯತೆ ನೀಡುತ್ತಿದೆ ಎಂದರು.

ತಂತ್ರಜ್ಞಾನ ಎಷ್ಟೇ ಮಹತ್ವದ ಪಾತ್ರ ನಿರ್ವಹಿಸಬಹುದು. ಆದರೆ ಅದು ಎಂದೂ ದೇವರನ್ನು ಬದಲಿಸಲಾಗದು. ನಾವೆಲ್ಲರೂ ಅಂತಿಮವಾಗಿ ದೇವರ ಕೈಗೊಂಬೆಯಾಗಿದ್ದೇವೆ. ನಾವೆಲ್ಲರೂ ದೇವರನ್ನು ಅವಲಂಬಿಸಿದ್ದೇವೆ. ಅದೇ ವೇಳೆ ನಾವು ನಮ್ಮ ಕರ್ತವ್ಯ ನಿರ್ವಹಿಸಬೇಕು ಎಂದು ತಿಳಿಸಿದರು.

ಪ್ರತಿಯೊಂದು ರಾಜ್ಯದ ರಾಜಧಾನಿಯಲ್ಲಿ ಹಾಗೂ ಹಿಂದೂ ಜನಸಂಖ್ಯೆ ಇರುವ ಪ್ರತಿಯೊಂದು ದೇಶದಲ್ಲಿ ವೆಂಕಟೇಶ್ವರ ಸ್ವಾಮಿ ದೇವಾಲಯ ನಿರ್ಮಿಸುವ ಆಶಯವನ್ನು ನಾಯ್ಡು ವ್ಯಕ್ತಪಡಿಸಿದ್ದಾರೆ. ಆಂಧ್ರ ಪ್ರದೇಶವು 27 ಸಾವಿರ ದೇವಾಲಯಗಳನ್ನು ಹೊಂದಿದೆ ಹಾಗೂ ಪ್ರತಿ ವರ್ಷ 21 ಕೋಟಿ ಯಾತ್ರಿಗಳು ಬರುತ್ತಾರೆ. ಇದು ದೇಶದಲ್ಲೇ ಅತಿ ಹೆಚ್ಚಿನದಾಗಿದೆ ಎಂದು ಮುಖ್ಯಮಂತ್ರಿ ಹೇಳಿದರು.




## ವಾರ ಭವಿಷ್ಯ

**ದಿನಾಂಕ : 16.02.2025 ರಿಂದ 22.02.2025ರ ವರೆಗೆ**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ನಿರೀಕ್ಷಿತ ಮಟ್ಟದಲ್ಲಿ ಆದಾಯವಿರುವುದರಿಂದ ಹಣಕಾಸಿನ ಚಿಂತೆ ಬೇಡ. ಬಾಕಿ ಸಾಲಗಳನ್ನು ತೀರಿಸಲು ಹಲವು ದಾರಿಗಳು ಕಾಣಲಿದ್ದು, ಅದನ್ನು ಸದುಪಯೋಗಪಡಿಸಿಕೊಳ್ಳಿ, ಬಂಧುಗಳೊಂದಿಗೆ ಅರ್ಥವಿಲ್ಲದ ವಾಗ್ವಾದ ಬೇಡ, ಇದರಿಂದ ದ್ವೇಷ ಹೆಚ್ಚಾಗುತ್ತದೆಯೇ ವಿನಃ ಏನೂ ಪ್ರಯೋಜನವಿಲ್ಲ. ಅತಿಯಾದ ತಿರುಗಾಟದಿಂದ ಸ್ನಾಯುಗಳಲ್ಲಿ ಸೆಳೆತ ಕಾಣಿಸಿಕೊಳ್ಳಲಿದೆ. ಸೂಕ್ತ ವೈದ್ಯರನ್ನು ಕಾಣುವುದು ಮೇಲು. ಸೋಮ-ಮಂಗಳ-ಗುರು-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಸೋದರಿಯ ಮನೆಯಲ್ಲಿ ನಡೆಯಲಿರುವ ವಿವಾಹಾದಿ ಶುಭ ಕಾರ್ಯಗಳಲ್ಲಿ ನಿಮ್ಮದು ನಿರ್ಣಾಯಕ ಪಾತ್ರವಿರುತ್ತದೆ. ಕುಸಿದಿದ್ದ ಆದಾಯದಲ್ಲಿ ತುಸು ಚೇತರಿಕೆ ಕಾಣಿಸಿಕೊಂಡು ಜೀವನದಲ್ಲಿ ಲವಲವಿಕೆ ಕಂಡುಬರಲಿದೆ, ವಿನಾಕಾರಣ ಬಂಧುಗಳು ಮಾಡುವ ವಿರೋಧಗಳಿಗೆ ಕಾರಣಗಳನ್ನು ಹುಡುಕಲು ಹೋಗಬೇಡಿ, ಇದರಿಂದ ನಿಮ್ಮ ಸಮಯ ಮತ್ತು ಹಣ ವ್ಯರ್ಥವಾಗಲಿದೆ. ವಿದ್ಯಾರ್ಥಿಗಳಿಗೆ ಉತ್ತಮ ದಿನಗಳು ಬರಲಿವೆ. ಬುಧ-ಗುರು-ಶುಕ್ರ-ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಗೊಂದಲಮಯವಾದ ವಿಷಯಗಳಲ್ಲಿ ತುಸು ತಾಳ್ಮೆಯಿಂದ ನಿರ್ಧಾರ ಕೈಗೊಳ್ಳುವುದು ಎಲ್ಲಾ ದೃಷ್ಟಿಯಿಂದ ಉತ್ತಮ. ಹಿರಿಯರಿಂದ ಬರಬೇಕಾಗಿ ರುವ ಸ್ವತ್ತು ತುಸು ತಡವಾದರೂ ನಿಮ್ಮ ಕೈ ಸೇರಲಿದೆ. ಸಾಂಪ್ರದಾಯಿಕ ಪರೀಕ್ಷೆಗಳನ್ನು ಕಟ್ಟಿರುವ ಅಭ್ಯರ್ಥಿಗಳಿಗೆ ನಿರೀಕ್ಷೆಗಿಂತ ಹೆಚ್ಚಿನ ಫಲಿತಾಂಶ ಬರಲಿದೆ. ವಿನಾಕಾರಣ ಹಿರಿಯರು ಕೆಲವು ವಿಷಯಗಳಲ್ಲಿ ನಿಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಹೋಗುವರು. ಗೋ ಸೇವೆ ಮಾಡಿ. ಭಾನು-ಬುಧ-ಗುರು-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೂ.ಡ.ಡಿ.ಡು.ಡೆ.ಡೋ)**

ಹಳೆಯ ವೈಷಮ್ಯವನ್ನು ಮರೆತು ಹಿರಿಯರು ನಿಮ್ಮಲ್ಲಿಗೆ ಬರುವರು ಅವರನ್ನು ಆದರಿಸುವುದರಿಂದ ನಿಮ್ಮ ದೊಡ್ಡಗುಣ ಅವರಿಗೆ ಅರಿವಾಗಲಿದೆ. ವೃತ್ತಿಯಲ್ಲಿ ಹೆಚ್ಚಿನ ಆದಾಯವನ್ನು ನಿರೀಕ್ಷಿಸಬಹುದು, ಕೃಷಿ ಭೂಮಿಯನ್ನು ಕೊಡು-ಕೊಳ್ಳುವ ವಿಚಾರದಲ್ಲಿ ದುಡುಕಿನ ನಿರ್ಧಾರ ಬೇಡ. ಕುಟುಂಬದಲ್ಲಿ ತುಸು ಮುನಿಸಿದ್ದರೂ ಸಂತೋಷ ನೆಮ್ಮದಿಗೆ ಕಡಿಮೆಯಿಲ್ಲ.ಕಳೆದು ಹೋದ ವಸ್ತು ಮರಳಿ ಕೈಸೇರಲಿದೆ. ತೀರ್ಥಸ್ನಾನ ಮಾಡುವ ಯೋಗವಿದೆ. ಸೋಮ-ಮಂಗಳ-ಬುಧ-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಸ್ನೇಹಿತರೊಂದಿಗಿರುವ ಭಿನ್ನಾಭಿಪ್ರಾಯವನ್ನು ಮರೆತು ಮುನ್ನಡೆಯು ವುದು ಮೇಲು, ಮುಂದೆ ಅವರಿಂದ ಹೆಚ್ಚಿನ ನೆರವನ್ನು ನಿರೀಕ್ಷಿಸಬಹುದು. ಮಾನಸಿಕ ಒತ್ತಡದಿಂದ ಹೊರಬರಲು ಧ್ಯಾನ, ಯೋಗ ಗಳಿಗೆ ಮೊರೆ ಹೋಗುವುದು ಮೇಲು, ವಿನಾಕಾರಣ ಸಾಲಗಳನ್ನು ಮಾಡಬೇಡಿ. ವಿದ್ಯಾರ್ಥಿ ಗಳು ಅಧ್ಯಯನದ ಕಡೆ ಹೆಚ್ಚಿನ ಗಮನಹರಿಸುವುದು ಭವಿಷ್ಯದ ದೃಷ್ಟಿಯಿಂದ ಉತ್ತಮ. ಗುರುಗಳ ಸೇವೆ ಮಾಡಿ. ಭಾನು-ಮಂಗಳ-ಬುಧ-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ನೀವು ಮಾಡುವ ಯಾವುದೇ ಕೆಲಸಗಳು ಆರಂಭದಲ್ಲಿ ವೇಗ ಪಡೆದರೂ ಕ್ರಮೇಣ ಮಂದಗತಿಯಲ್ಲಿ ಸಾಗಲಿದೆ. ಇದಕ್ಕೆ ಕಾರಣ ನಿಮ್ಮ ಸೋಮಾರಿತನವೆಂದರೂ ತಪ್ಪಾಗಲಾರದು, ಇದನ್ನು ಹೇಗೆ ಸರಿಪಡಿಸ ಬೇಕೆಂಬುದರ ಬಗ್ಗೆ ಚಿಂತಿಸಿ. ಆದಾಯದ ಮೂಲವನ್ನು ಹೆಚ್ಚಿಸಿಕೊಳ್ಳಲು ಹರಹಾಸ ಪಡುವಿರಿ, ಅಪರೂಪಕ್ಕೆ ಅತಿಥಿಗಳ ಆಗಮನವಾಗಲಿದೆ. ಹೈನುಗಾರಿಕೆ ಲಾಭ ದಾಯಕವಾಗಲಿದೆ. ಬುಧ-ಗುರು-ಶುಕ್ರ-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ರಾಜಕಾರಣಿಗಳು ಜನ ಸಂಪರ್ಕವನ್ನು ಹೆಚ್ಚಿಸಿಕೊಳ್ಳಲು ಯತ್ನಿಸುವರು ಮತ್ತು ಈ ನಿಟ್ಟಿನಲ್ಲಿ ಹಲವು ಅಡ್ಡಿ-ಆತಂಕಗಳನ್ನು ಎದುರಿಸ ಬೇಕಾದೀತು. ಅವಿವಾಹಿತರಿಗೆ ಕಂಕಣಬಲ ಕೂಡಿಬರಲಿದ್ದು, ಸಂಬಂಧವು ಅತ್ಯುತ್ತಮವಾಗಿರಲಿದೆ. ವಿದ್ಯಾರ್ಥಿಗಳು ಉನ್ನತಾಧ್ಯಯನಕ್ಕೆ ಈಗಿನಿಂದಲೇ ಪೂರ್ವಸಿದ್ಧತೆ ಮಾಡಿಕೊಳ್ಳುವುದು ಮೇಲು, ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುವವರಿಗೆ ಸರ್ಕಾರದ ನಿರ್ಧಾರಗಳಿದ ನಿರಾಸೆಯಾಗಲಿದೆ ಗುರು-ಶುಕ್ರ-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಕಷ್ಟಪಟ್ಟು ಮುಂದೆ ಬರುತ್ತಿರುವ ನಿಮ್ಮ ಏಳಿಗೆಯನ್ನು ಕೆಲವರು ಸಹಿಸದೇ ಹೋಗುವರು ಆತುರಪಟ್ಟು ಮಾಡುವ ಕೆಲಸಗಳಿಂದಾಗಿ ಆಗುವ ಲಾಭಕ್ಕಿಂತ ನಷ್ಟವೇ ಹೆಚ್ಚು, ತುಸು ತಾಳ್ಮೆಹಾಗೂ ಜಾಣ್ಮೆಯಿಂದ ನಡೆದುಕೊಳ್ಳಿ ಹಿರಿಯರು ಮಾಡಲಿರುವ ನೆರವಿನಿಂದ ಕೆಲವು ಕೌಟುಂಬಿಕ ಸಮಸ್ಯೆಗಳು ಬಗೆಹರಿಯಲಿವೆ, ವಿದ್ಯಾವಂತ ಪದವೀಧರರಿಗೆ ಉತ್ತಮ ವೇತನದ ನೌಕರಿ ದೊರೆಯಲಿದೆ, ಆರೋಗ್ಯದ ವಿಷಯದಲ್ಲಿ ಉದಾಸಿನತೆ ಸಲ್ಲದು, ಅತಿಯಾದ ಭೋಜನಕೂಟ ಒಳ್ಳೆಯದಲ್ಲ. ಸಜ್ಜರ ಸೇವೆ ಮಾಡಿ ಅನುಗ್ರಹ ಪಡೆಯಿರಿ. ಸೋಮ-ಮಂಗಳ-ಗುರು-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ನೀವಾಡಲಿರುವ ಮಾತಿನಲ್ಲಿ ನಯನಾಜೂಕಿನೊಂದಿಗೆ ತುಸು ಗಾಂಭೀರ್ಯ ವಿದ್ದರೆ ಚೆನ್ನ, ಆದಾಯವು ಖರ್ಚು-ವೆಚ್ಚಗಳನ್ನು ಸರಿದೂಗುವಷ್ಟಿರುವುದರಿಂದ ಹೆಚ್ಚಿನ ನಿರೀಕ್ಷೆ ಈ ವಾರದ ಮಟ್ಟಿಗೆ ಬೇಡ, ಸೊದರನ ಉದ್ಯೋಗದಲ್ಲಿ ಬದಲಾವಣೆ ಕಂಡುಬರಲಿದೆ. ಬಹುರಾಷ್ಟ್ರೀಯ ಕಂಪನಿಗಳಿಗೆ ಭೂಮಿಯನ್ನು ಮಾರಾಟ ಮಾಡಿದ್ದಾದರೆ ಹೆಚ್ಚಿನ ಲಾಭವನ್ನು ನಿರೀಕ್ಷೆ ಮಾಡಬಹುದು. ಮಹಿಳೆಯರಿಗೆ ಉತ್ತಮ ದಿನಗಳು. ಸೋಮ-ಗುರು-ಶನಿ-ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ವಿದ್ಯಾರ್ಥಿಗಳಿಗೆ ನಿರೀಕ್ಷಿಸಿದಷ್ಟು ಫಲಿತಾಂಶ ಬರದಿದ್ದರೂ ಅದರ ಸಮೀಪಕ್ಕೆ ಬರಲಿದೆ, ಆತುರಪಟ್ಟು ಆಗಲಿರುವ ಕೆಲಸಗಳಿಗೆ ನೀವೇ ಅಡ್ಡಗಾಲಾಗಬೇಡಿ. ಮಹಿಳೆಯರು ತಾವು ಮಾಡಲಿರುವ ರಹಸ್ಯ ಹಣಕಾಸಿನ ವ್ಯವಹಾರದಿಂದಾಗಿ ಭಾರೀ ನಷ್ಟಕ್ಕೆ ಒಳಗಾಗುವ ಸಂಭವವಿದೆ. ರಾಜಕಾರಣಿ ಗಳು ತಮ್ಮ ಮಾತಿನ ಚಾತುರ್ಯದಿಂದ ಜನರ ಮನ್ನಣೆ ಗಳಿಸುವರು, ಹರಿತ ವಾದ ಆಯುಧಗಳನ್ನು ಉಪಯೋಗಿಸುವಾಗ ಎಚ್ಚರದಿಂದಿರಿ. ಮಂಗಳ-ಬುಧ-ಶನಿ-ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ತಾಂತ್ರಿಕ ಕ್ಷೇತ್ರದಲ್ಲಿ ಕೆಲಸ ಮಾಡುವ ಯುವಕರು ಕರ್ತವ್ಯದಲ್ಲಿ ಶ್ರದ್ಧೆ ವಹಿಸದೇ ಹೋದಲ್ಲಿ ನೌಕರಿಗೇ ಸಂಚಕಾರ ಬರಬಹುದು. ಪೂರ್ವಿಕರು ನಡೆಸಿಕೊಂಡುಬರುತ್ತಿರುವ ವ್ಯವಹಾರವನ್ನೇ ಸದ್ಯಕ್ಕೆ ಮುಂದುವರೆಸಿಕೊಂಡು ಹೋಗುವುದು ಮೇಲು. ಜನದಟ್ಟಣೆ ಪ್ರದೇಶದಲ್ಲಿ ಮಕ್ಕಳನ್ನು ಜಾಗ್ರತೆಯಿಂದ ನೋಡಿಕೊಳ್ಳಿ, ರಿಯಲ್ ಎಸ್ಟೇಟ್ ವ್ಯವಹಾರ ಮಾಡುವವರಿಗೆ ಹೆಚ್ಚಿನ ಲಾಭ ಬರಲಿದೆ, ಅವಿವಾಹಿತರಿಗೆ ಕಂಕಣಬಲ ಕೂಡಿಬರಲಿದೆ. ಗುರು ಚರಿತ್ರೆ ಪಾರಾಯಣ ಮಾಡಿ. ಬುಧ-ಗುರು-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಇಷ್ಟು ದಿನ ಬಂಧು ವರ್ಗದಿಂದ ದೂರವಿದ್ದ ನಿಮಗೆ ಈಗ ಅವರ ಒಡನಾಟ ಬೇಕೆನಿಸಲಿದೆ, ಅದಕ್ಕೆ ಹಿರಿಯರ ನೆರವು ಕೋರುವಿರಿ. ಬರಬೇಕಾಗಿರುವ ಬಾಕಿ ಹಣಕಾಸಿನ ಬಗ್ಗೆ ಉದಾಸೀನತೆ ತೋರಿದಲ್ಲಿ ಮುಂದೆ ನೀವೇ ಸಾಲಗಾರರಾಗಬೇಕಾದೀತು. ವೈಯಕ್ತಿಕ ವಿಚಾರಗಳನ್ನು ಅನಾಪ್ತರಲ್ಲಿ ಹೇಳಿಕೊಳ್ಳಬೇಡಿ. ವಿದ್ಯಾವಂತಳಾದ ಮಗಳಿಗೆ ಉತ್ತಮ ವೇತನದ ನೌಕರಿ ದೊರೆಯಲಿದೆ. ತೀರ್ಥಕ್ಷೇತ್ರಗಳಲ್ಲಿ ತೀರ್ಥ ಸ್ನಾನ ಮಾಡುವಿರಿ. ಭಾನು-ಗುರು-ಶುಕ್ರ-ಶುಭ ದಿನಗಳು.

# ಆರೋಗ್ಯ ಕ್ಷೇತ್ರದ ಖಾಸಗೀಕರಣ ನಿಲ್ಲಿಸುವಂತೆ ಎಸ್‌ಯುಸಿಐ ಆಗ್ರಹ




ದಾವಣಗೆರೆ, ಫೆ.17- ಸರ್ಕಾರಿ ಆಸ್ಪತ್ರೆಗಳನ್ನು ಉಳಿಸುವ ಜತೆಗೆ ಸುಸಜ್ಜಿತಗೊಳಿಸಬೇಕು ಮತ್ತು ಆರೋಗ್ಯ ಕ್ಷೇತ್ರದ ಖಾಸಗೀಕರಣ ನಿಲ್ಲಿಸಬೇಕೆಂದು ಆಗ್ರಹಿಸಿ ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ವತಿಯಿಂದ ನಗರದ ಉಪ ವಿಭಾಗಾಧಿಕಾರಿ ಕಚೇರಿ ಬಳಿ ಸೋಮವಾರ ಪ್ರತಿಭಟನೆ ನಡೆಸಿತು.

ಎ.ಸಿ. ಕಚೇರಿ ಬಳಿ ಜಮಾಯಿಸಿದ ಸಂಘಟನೆಯ ಪದಾಧಿಕಾರಿಗಳು ಬೇಡಿಕೆ ಈಡೇರಿಸುವಂತೆ ಉಪ ವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಿ ಮುಖ್ಯಮಂತ್ರಿಗಳಿಗೆ ರವಾನಿಸುವಂತೆ ಮನವಿ ಮಾಡಿದರು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ದಾವಣಗೆರೆಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸಬೇಕು. ಜಯದೇವ ಹೃದ್ರೋಗ ಆಸ್ಪತ್ರೆಯ ಜಿಲ್ಲಾ ಘಟಕವನ್ನು ನಗರದಲ್ಲಿ ಸ್ಥಾಪಿಸಬೇಕು. ಜಿಲ್ಲಾಸ್ಪತ್ರೆ, ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಸೇರಿದಂತೆ, ಪಿಹೆಚ್‌ಸಿ ಹಾಗೂ ತಾಲ್ಲೂಕು ಆಸ್ಪತ್ರೆಗಳ ಗುಣಮಟ್ಟ ಹೆಚ್ಚಿಸುವ ಜತೆಗೆ, ಆಸ್ಪತ್ರೆಯ ತುರ್ತು ಚಿಕಿತ್ಸಾ ಘಟಕದಲ್ಲಿ ಬೆಡ್ ಹಾಗೂ ವೈದ್ಯರ ಸಂಖ್ಯೆ ಹೆಚ್ಚಿಸಬೇಕೆಂದು ಒತ್ತಾಯಿಸಿದರು.

ಆಸ್ಪತ್ರೆಗೆ ಅವಶ್ಯಕ ಸುಸಜ್ಜಿತ ಕಟ್ಟಡ, ಕೊಠಡಿಗಳು, ಶೌಚಾಲಯ, ಶುದ್ಧ ಕುಡಿಯುವ ನೀರು, ಮೂಲಭೂತ ಆಧುನಿಕ ಯಂತ್ರೋಪಕರಣಗಳು ಹಾಗೂ ಇತರೆ ಸೌಕರ್ಯಗಳನ್ನು ಒದಗಿಸಬೇಕು. ಅವಶ್ಯಕತೆ ಇರುವಷ್ಟು ನುರಿತ ವೈದ್ಯರು, ದಾದಿಯರು, ಮತ್ತಿತರೆ ವೈದ್ಯಕೀಯ ಸಿಬ್ಬಂದಿ ಹಾಗೂ 'ಡಿ' ಗ್ರೂಪ್ ನೌಕರರನ್ನು ಖಾಯಂ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಬೇಕು ಎಂದರು. ಬಿಪಿಎಲ್ ಕಾರ್ಡ್‌ದಾರರು ಸೇರಿದಂತೆ, ಎಲ್ಲಾ ಜನ ಸಾಮಾನ್ಯರಿಗೆ ಉಚಿತ ಚೀಟಿ, ಸ್ಕ್ಯಾನಿಂಗ್, ರಕ್ತ ಪರೀಕ್ಷೆ, ಸರ್ಜರಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಒತ್ತಾಯಿಸಿದರು.

ಜಿಲ್ಲಾಸ್ಪತ್ರೆ ಹಾಗೂ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಚೀಟಿ ಹಾಗೂ ಹಣ ಪಾವತಿ, ಔಷಧಿ ಕೌಂಟರ್‌ಗಳ ಸಂಖ್ಯೆ ಹೆಚ್ಚಿಸಬೇಕು. ಆಸ್ಪತ್ರೆಯ ಔಷಧಾಲಯಗಳಲ್ಲಿ ಗುಣಮಟ್ಟದ ಎಲ್ಲಾ ಅವಶ್ಯಕ ಔಷಧಿಗಳನ್ನು ಪೂರೈಸಬೇಕು. ರಾಜ್ಯದಲ್ಲಿ ಹೆಚ್ಚುತ್ತಿರುವ ಬಾಣಂತಿ ಮತ್ತು ನವಜಾತ ಶಿಶುವಿನ ಸಾವು ತಡೆಗಟ್ಟಬೇಕು. ಬಜೆಟ್‌ನಲ್ಲಿ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ನೀಡಬೇಕು ಎಂದರು.

ಜಯದೇವ ಹೃದ್ರೋಗ ಘಟಕ ಪ್ರಾರಂಭಿಸಲು ದಾವಣಗೆರೆಗೆ ತಜ್ಞರ ಸಮಿತಿ ಭೇಟಿ ಮಾಡಿ ಸ್ಥಳ ಗುರುತಿಸಿದರೂ ಘಟಕ ಪ್ರಾರಂಭಿಸದಿರುವುದು ಆಶ್ಚರ್ಯ ಉಂಟುಮಾಡಿದೆ ಖಾಸಗಿ ಆಸ್ಪತ್ರೆಗಳ ಲಾಭಿಗೆ ಸರ್ಕಾರಗಳು ಮಣಿದಂತಿವೆ. ಶಿಥಿಲಾವಸ್ಥೆಯಲ್ಲಿರುವ ಜಿಲ್ಲಾ ಆಸ್ಪತ್ರೆಯ ಕಟ್ಟಡಕ್ಕೆ ಪರ್ಯಾಯ ವ್ಯವಸ್ಥೆ ಮಾಡಿ ಸುಸಜ್ಜಿತ ಹೊಸ ಕಟ್ಟಡ ನಿರ್ಮಾಣ ಮಾಡಬೇಕು ಎಂದು ಆಗ್ರಹಿಸಿದರು.

ಈ ವೇಳೆ ಕೈದಾಳೆ ಮಂಜುನಾಥ್, ಕುಕ್ಕುವಾಡ ಮಂಜುನಾಥ್, ಅಪರ್ಣಾ, ತಿಪ್ಪೇಸ್ವಾಮಿ ಅಣಬೇರು, ಮಧು ತೊಗಲೇರಿ, ಹಿರೇಮಠ, ಇಸ್ಮಾಯಿಲ್, ಪರಶುರಾಮ, ನಾಗಸ್ಮಿತ, ಭಾರತಿ, ಅನಿಲ್ ಇತರರು ಇದ್ದರು.

# ಸಿದ್ಧಗಂಗಾ ಪ್ರೌಢಶಾಲೆಯ ದೀಪಕ್‌ಗೆ ಕಿರಿಯ ವಿಜ್ಞಾನಿ ಪ್ರಶಸ್ತಿ



ದಾವಣಗೆರೆ, ಫೆ. 17- ಬಾಲ್ಯ ದಿಂದಲೂ ಕುತೂಹಲ, ವಿಜ್ಞಾನದಲ್ಲಿ ಆಸಕ್ತಿ, ಇಸ್ರೋದೊಡನೆ ನಿರಂತರ ಸಂಪರ್ಕದ ಪ್ರತಿಫಲವಾಗಿ ನಗರದ ಸಿದ್ಧಗಂಗಾ ಪ್ರೌಢಶಾಲೆಯ 10ನೇ ತರಗತಿ ವಿದ್ಯಾರ್ಥಿ ದೀಪಕ್ ಜಿ.ಕೆ. ಈಚೆಗೆ ನಡೆದ ಸ್ಪರ್ಧೆಯಲ್ಲಿ ಭಾಗವಹಿಸಿ 'ಜ್ಯೂನಿಯರ್ ಸೈಂಟಿಸ್ಟ್ ಪ್ರಶಸ್ತಿ'ಪಡೆದಿದ್ದಾನೆ.

6ನೇ ತರಗತಿಯಲ್ಲಿದ್ದಾಗ ಭಾರತದ ಬಾಹ್ಯಾಕಾಶ ಸಂಶೋಧನಾ ಕೇಂದ್ರ ದವರು ನಡೆಸಿದ 'ಪ್ಯೂರಿಫೈ ದ ಅರ್ಥ್' ಸ್ಪರ್ಧೆಯಲ್ಲಿ ದೀಪಕ್ ಭಾಗವಹಿಸಿ ಸಮಾಧಾನಕರ ಬಹುಮಾನ ಪಡೆದಿದ್ದು, ಇಸ್ರೋದ ಕಾರ್ಯನಿರ್ವಾಹಕ ಅಧಿಕಾರಿ ಸರ್ ಕೌಸ್ತುಬ್ ರವರ ಪರಿಚಯ ಮತ್ತು ಮಾರ್ಗದರ್ಶನದಿಂದ 'ಗ್ರಿಪ್ಪರ್ ಎಕ್ಸ್‌ಪ್ಲೋರೇಷನ್' ಕಂಡು ಹಿಡಿದಿದ್ದಾರೆ.

ರಾಕೆಟ್ ಉಡಾವಣೆಯಲ್ಲಿ ಪ್ರಮುಖ ಪಾತ್ರ ಲ್ಯಾಂಡರ್ ಎಂದರಿತ ಬಾಲಕ ದೀಪಕ್ 'ಲ್ಯಾಂಡರ್ ಗ್ರಿಪ್ಪರ್' ಮೇಲೆ ತನ್ನ ಅಧ್ಯಯನ ಕೇಂದ್ರೀಕರಿಸಿ ಸಂಶೋಧನೆ ಪ್ರಾರಂಭಿಸಿದನು. ಗ್ರಿಪ್ಪರ್ ಜೊತೆ ಸೆನ್ಸಾರ್ ಜೋಡಿಸಿದಾಗ ಅದು ವಿಫಲವಾಗಿದ್ದನ್ನು ಕಂಡು ಗ್ರಿಪ್ಪರ್ ಜೊತೆ 'ಬ್ಲೂಟೂತ್ ಮೆಮೊರಿ ಸ್ಪೆನ್ಸರ್' ಉಪಯೋಗಿಸಿದಾಗ 'ಲ್ಯಾಂಡರ್ ಗ್ರಿಪ್ಪರ್' ಸಫಲವಾಯಿತು. ಈ ಪ್ರಯತ್ನವನ್ನು ಇಸ್ರೋಗೆ ಅಂತರ್ಜಾಲದಲ್ಲಿ ಕಳಿಸಿಕೊಟ್ಟಾಗ ಇಸ್ರೋ ಮುಖ್ಯಸ್ಥರು ಒಪ್ಪಿಗೆ ಸೂಚಿಸಿ, ಲ್ಯಾಂಡರ್ ಗ್ರಿಪ್ಪರ್ ಮಾದರಿ ಮಾಡಲು ಸೂಚಿಸಿದರು. ಈ ಸಂಶೋಧನೆಯನ್ನು 23 ದಿನಗಳ ಕಾಲ ಪರಿಶೀಲಿಸಿ ಅಂತಿಮವಾಗಿ ಜನವರಿ 25ರಂದು 'ಜ್ಯೂನಿಯರ್ ಸೈಂಟಿಸ್ಟ್' ಪ್ರಶಸ್ತಿ ನೀಡಿ ಪುರಸ್ಕರಿಸಿದ್ದಾರೆ.

ದೀಪಕ್, ಕೆಎಸ್‌ಆರ್‌ಟಿಸಿಯ ಕಂಡಕ್ಟರ್ ದಂಪತಿ ಗಂಗಾಧರ ಮತ್ತು ರಾಜೇಶ್ವರಿ ಸುಪುತ್ರ.


# ರಾಜ್ಯಮಟ್ಟದ ಮುಕ್ತ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ನಗರದ ಮಕ್ಕಳು





ದಾವಣಗೆರೆ, ಫೆ. 17- ಈಚೆಗೆ ಮಧುರೈ, ತಮಿಳುನಾಡಿನಲ್ಲಿ ನಡೆದ 24ನೇ ರಾಷ್ಟ್ರಮಟ್ಟದ ರೋಲರ್ ಸ್ಕೇಟಿಂಗ್ ಚಾಂಪಿಯನ್ ಶಿಪ್‌ನಲ್ಲಿ ನಗರದ ಸ್ಕೇಟರ್‌ಗಳಾದ ಫಲಕ್ ನಿಗಾರ್ 2000 ಮೀಟರ್ ಓಟದಲ್ಲಿ ಕಂಚಿನ ಪದಕ, ರಿಲೇಯಲ್ಲಿ ಕಂಚಿನ ಪದಕಗಳನ್ನು ಪಡೆದು ಅಂತರರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಅರುಣ್ ಕೆ.ಪಿ. ರಿಲೇಯಲ್ಲಿ ಬೆಳ್ಳಿ ಪದಕ, ಶೌರ್ಯ ಜಿ. ಶೆಟ್ಟಿ ರಿಲೇಯಲ್ಲಿ ಬಂಗಾರದ ಪದಕ, ಚಿರಂತ್ ಜಿ.ಎಸ್. ರಿಲೇಯಲ್ಲಿ ಬೆಳ್ಳಿ ಪದಕ ಪಡೆದುಕೊಂಡಿದ್ದಾರೆ.

# ಕರ್ನಾಟಕದ ಗಾಂಧಿ, ಬಸವ ತತ್ವ ಪ್ರಚಾರಕ ಶರಣ ಹರ್ಡೇಕರ ಮಂಜಪ್ಪ





ಸ್ವಾತಂತ್ರ್ಯ ಹೋರಾಟಗಾರರಾದ ಹರ್ಡೇಕರ ಮಂಜಪ್ಪನವರು 18.02.1886 ರಂದು ಶಿರಸಿ ತಾಲ್ಲೂಕಿನ ಬನವಾಸಿಯಲ್ಲಿ ಜನಿಸುತ್ತಾರೆ.

ಶಿರಸಿಯಲ್ಲಿ ತಾವು ಕಲಿತ ಶಾಲೆಯಲ್ಲಿಯೇ ಶಿಕ್ಷಕರಾಗಿ ಕೆಲಸ ನಿರ್ವಹಿಸುತ್ತಾರೆ. ಸ್ವಾತಂತ್ರ್ಯ ಹೋರಾಟದ ವಾತಾವರಣದಿಂದ ಪ್ರಭಾವಿತರಾಗಿ, ಕೆಲಸಕ್ಕೆ ರಾಜೀನಾಮೆ ಕೊಟ್ಟು, ದಾವಣಗೆರೆಗೆ ಬಂದು 1906 ರಲ್ಲಿ ಧನುರ್ಧಾರಿ ಎನ್ನುವ ಪತ್ರಿಕೆಯನ್ನು ಆರಂಭಿಸುತ್ತಾರೆ. ತಿಲಕರು ಮಹಾರಾಷ್ಟ್ರದಲ್ಲಿ ಪ್ರಕಟಿಸುತ್ತಿದ್ದ ಮರಾಠಿ ಪತ್ರಿಕೆಯ ಲೇಖನಗಳನ್ನು ; ಕನ್ನಡ ಅನುವಾದ ಮಾಡಿ ಸ್ವಂತ ಮುದ್ರಣ ಯಂತ್ರದಿಂದ ಪ್ರಕಟಿಸುತ್ತಿದ್ದರು. ಆರ್ಥಿಕ ಅವ್ಯವಸ್ಥೆಯಿಂದ ಪತ್ರಿಕೆ ನಿಲ್ಲುತ್ತದೆ. ನಂತರ ಖಾದಿವ್ರತ ಕೈಗೊಂಡು ಹರಿಹರದ ಗೆಳೆಯ ಬಾಳಪ್ಪನ ಭೂಮಿಯಲ್ಲಿ ಸತ್ಯಾಗ್ರಹ ಎಂಬ ಆಶ್ರಮ ನಿರ್ಮಿಸಿಕೊಂಡಿರುತ್ತಾರೆ. ಬೆಳಗಾವಿಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆದಾಗ, 'ಬಸವೇಶ್ವರ ಸೇವಾದಳ' ಎನ್ನುವ ಸ್ವಯಂಸೇವಕರ ಸಂಘಟನೆವನ್ನು ರಚಿಸಿ; ಅಧಿವೇಶನದ ಯಶಸ್ಸಿಗೆ ಕಾರಣರಾಗುತ್ತಾರೆ.

ತಾಯಿಯ ಮರಣದ ನಂತರ ಕರ್ನಾಟಕದ ಉದ್ದಗಲಕ್ಕೂ ಹಳ್ಳಿಗಳಲ್ಲಿ ಸಂಚರಿಸಿ, ಸ್ವಾತಂತ್ರ್ಯ ಹೋರಾಟದ ಜಾಗೃತಿಯ ಭಾಷಣಗಳನ್ನು ಮಾಡುತ್ತಾರೆ. ಅನೇಕ ಜನರು ಇವರಿಂದ ಪ್ರಭಾವಿತರಾಗಿ; ಸ್ವಾತಂತ್ರ್ಯ ಹೋರಾಟಕ್ಕೆ ಹೆಜ್ಜೆ ಹಾಕುತ್ತಾರೆ, ಆದ್ದರಿಂದ ಇವರನ್ನು ಕರ್ನಾಟಕದ ಗಾಂಧಿ ಎಂದು ಕರೆಯುತ್ತಾರೆ. ಅನೇಕ ಸಾಮಾಜಿಕ ಕಾರ್ಯಗಳನ್ನು ಮಾಡುತ್ತಾ ಅಲ್ಲಲ್ಲಿ ರಾಟಿ ಸಂಘಗಳನ್ನು, ಆಲಮಟ್ಟಿಯಲ್ಲಿ ವಿದ್ಯಾಲಯವನ್ನು ಸ್ಥಾಪಿಸಿ, ಅಲ್ಲಿ ತಾವೂ ಸ್ವತಃ ಚರಕದಿಂದ ನೂಲು ತೆಗೆಯುವ ಕೆಲಸ ಮಾಡುತ್ತಾರೆ. ಇಷ್ಟಲ್ಲದೇ ಮಂಜಪ್ಪನವರು ಬಸವಣ್ಣನವರ ಅಪ್ಪಟ ಅನುಯಾಯಿಗಳು ಆಗಿದ್ದರು.

1913ರಲ್ಲಿ ದಾವಣಗೆರೆಯಲ್ಲಿ ಇದ್ದಾಗ ಅಲ್ಲಿನ ಬಸವಾಭಿಮಾನಿಗಳ ತರುಣ ಸಂಘದೊಂದಿಗೆ ಮೃತ್ಯುಂಜಯ ಸ್ವಾಮಿಗಳು ಕೂಡಿಕೊಂಡು ವಿರಕ್ತ ಮಠದಲ್ಲಿ ಪ್ರಪ್ರಥಮವಾಗಿ ಬಸವ ಜಯಂತಿಯನ್ನು ಶುರು ಮಾಡುತ್ತಾರೆ. ಬಸವಾದಿ ಶರಣರ ಸಂದೇಶಗಳನ್ನು ತಿಳಿಸುವ ವಚನಗಳನ್ನು, ಚರಿತ್ರೆಗಳನ್ನು ಮುದ್ರಿಸಿ, ಹಂಚುತ್ತಾರೆ. ಮುಂದೆ ಶರಣ ಸಂದೇಶ, ಉದ್ಯೋಗ ಎಂಬ ಮಾಸಪತ್ರಿಕೆಗಳನ್ನು ಆರಂಭಿಸುತ್ತಾರೆ. ಅನೇಕ ಕೃತಿಗಳನ್ನು ರಚಿಸುತ್ತಾರೆ. ಗಾಂಧೀಜಿಯವರು ಕರ್ನಾಟಕಕ್ಕೆ ಬಂದಾಗ; ಅವರೊಂದಿಗೆ ಸುತ್ತಾಡುತ್ತಾರೆ. ಸ್ವಾತಂತ್ರ್ಯ ಹೋರಾಟಗಾರರು, ಬಸವ ತತ್ವ ಪ್ರಚಾರಕಾರ ಹರ್ಡೇಕರ ಮಂಜಪ್ಪಣ್ಣವರು 03.01.1947ರಂದು ಲಿಂಗೈಕ್ಯರಾಗುತ್ತಾರೆ.

**-ಶಿವಪ್ರಸಾದ ಕರ್ಜಗಿ, ದಾವಣಗೆರೆ.**

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ವಿವಿಧ ಕೋರ್ಸ್‌ಗಳ ಪ್ರವೇಶಕ್ಕೆ ಅವಕಾಶ

ದಾವಣಗೆರೆ, ಫೆ.17- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ (ಜನವರಿ ಆವೃತ್ತಿ) ಪ್ರಥಮ ವರ್ಷದ ಬಿ.ಎ, ಬಿ.ಕಾಂ, ಬಿ.ಎಸ್ಸಿ., ಬಿ.ಲಿಬ್. ಐ.ಎಸ್ಸಿ., ಬಿ.ಸಿ.ಎ., ಬಿ.ಬಿ.ಎ, ಬಿ.ಎಸ್. ಡಬ್ಲ್ಯೂ, ಎಂ.ಎ, ಎಂ.ಕಾಂ, ಎಂ.ಎ-ಎಂ.ಸಿ.ಜೆ., ಎಂ.ಲಿಬ್, ಐಎಸ್ಸಿ., ಎಂ.ಬಿ.ಎ, ಎಂ.ಎಸ್ಸಿ ಎಂ.ಸಿ.ಎ, ಎಂ.ಎಸ್.ಡಬ್ಲ್ಯೂ, ಸ್ನಾತಕ, ಸ್ನಾತಕೋತ್ತರ ಪದವಿಗಳಿಗೆ ಮತ್ತು ಪಿಜಿ-ಡಿಪ್ಲೋಮಾ, ಡಿಪ್ಲೋಮಾ, ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಪ್ರವೇಶಾವಕಾಶ ಪ್ರಾರಂಭವಾಗಿದೆ.

ಎರಡು ಶೈಕ್ಷಣಿಕ ಕೋರ್ಸ್ಗಳನ್ನು ಏಕಕಾಲದಲ್ಲಿ ಒಂದು ಭೌತಿಕ ಕ್ರಮದಲ್ಲಿ ಮತ್ತೊಂದು ದೂರಶಿಕ್ಷಣ ಕ್ರಮದಲ್ಲಿ ಓದಲು ಅವಕಾಶವಿದೆ. ವಿದ್ಯಾರ್ಥಿಗಳು ವೆಬ್‌ಸೈಟ್ www.ksoumysuru.ac.in ಮೂಲಕ ಅರ್ಜಿಯನ್ನು ಭರ್ತಿ ಮಾಡಿ, ದಾವಣಗೆರೆ ಪ್ರಾದೇಶಿಕ ಕೇಂದ್ರಕ್ಕೆ ಖುದ್ದಾಗಿ ಭೇಟಿ ನೀಡಿ, ಆನ್‌ಲೈನ್ ಮುಖಾಂತರ ಪ್ರವೇಶಾತಿ ಶುಲ್ಕವನ್ನು ಪಾವತಿಸಿ ಪ್ರವೇಶ ಪಡೆಯಬಹುದು.

ಬಿಪಿಎಲ್ ಕಾರ್ಡ್ ಹೊಂದಿರುವ ಮಹಿಳಾ ವಿದ್ಯಾರ್ಥಿನಿಯರಿಗೆ, ಡಿಫೆನ್ಸ್ ಹಾಗೂ ಮಾಜಿ ಸೈನಿಕ ವಿದ್ಯಾರ್ಥಿಗಳಿಗೆ ಮತ್ತು ಆಟೋ, ಕ್ಯಾಬ್ ಚಾಲಕರು ಮತ್ತು ಅವರ ಮಕ್ಕಳಿಗೆ ಬೋಧನಾ ಶುಲ್ಕದಲ್ಲಿ ರಿಯಾಯಿತಿ ನೀಡಲಾಗುವುದು. ಅಲ್ಲದೇ ಕೋವಿಡ್-19 ರಿಂದ ಮೃತಪಟ್ಟವರ ಮಕ್ಕಳಿಗೆ, ತೃತೀಯ ಲಿಂಗಿಗಳಿಗೆ, ದೃಷ್ಟಿಹೀನ ವಿದ್ಯಾರ್ಥಿಗಳಿಗೆ ಪೂರ್ಣ ಶುಲ್ಕ ವಿನಾಯಿತಿ ಇರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಮೊ.ಸಂ: 9844926125, 8971004272, 8310676181, 9902517906, 9008905457, 8747919317, ಸಂಪರ್ಕಿಸಲು ಅಥವಾ ಖುದ್ದಾಗಿ ಕ.ರಾ.ಮು.ವಿ. ಪ್ರಾದೇಶಿಕ ಕೇಂದ್ರ, ಜೆ.ಹೆಚ್. ಪಟೇಲ್ ಬಡಾವಣೆ, ಶಾಮನೂರು ಹಿಂಭಾಗ, ನಾಗನೂರು ರಸ್ತೆಯಲ್ಲಿರುವ ಕಚೇರಿಯನ್ನು ಸಂಪರ್ಕಿಸಲು ಕ.ರಾ.ಮು.ವಿ ಪ್ರಾದೇಶಿಕ ಕೇಂದ್ರದ ಪ್ರಾದೇಶಿಕ ನಿರ್ದೇಶಕರಾದ ಡಾ.ವಿಜಯ್ ಪ್ರಕಾಶ್ ತಿಳಿಸಿದ್ದಾರೆ.

# 9 ವಿಶ್ವವಿದ್ಯಾಲಯ ಮುಚ್ಚುವ ಕ್ರಮಕ್ಕೆ ಎಐಡಿಎಸ್‌ಓ ಖಂಡನೆ

ದಾವಣಗೆರೆ, ಫೆ.17- ರಾಜ್ಯ ಕಾಂಗ್ರೆಸ್ ಸರ್ಕಾರವು ತನ್ನ ಸಂಪುಟ ಸಭೆಯ ಉಪಸಮಿತಿ ಮೂಲಕ 9 ವಿಶ್ವ ವಿದ್ಯಾಲಯಗಳನ್ನು ಮುಚ್ಚಲು ಕೈಗೊಂಡ ನಿರ್ಧಾರವನ್ನು ಎಐಡಿಎಸ್‌ಓ ಉಗ್ರವಾಗಿ ಖಂಡಿಸುತ್ತದೆ. ಹಿಂದಿನ ಬಿಜೆಪಿ ಸರ್ಕಾರ ಯಾವುದೇ ಶಿಕ್ಷಣ ತಜ್ಞರ ಅಭಿಪ್ರಾಯ ಸಂಗ್ರಹಿಸದೇ ಅಪ್ರಜಾತಾಂತ್ರಿಕವಾಗಿ ಈ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿತ್ತು. ನೃಪತುಂಗ, ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ ಎಂಬ ಪಟ್ಟ ಕಟ್ಟಿ ಇವುಗಳನ್ನು ಸ್ವ ಹಣಕಾಸು ಸಂಸ್ಥೆಗಳನ್ನಾಗಿ ಮಾಡಿ ಮೂರು ಪಟ್ಟು ಶುಲ್ಕ ಹೆಚ್ಚಿಸಲಾಗಿತ್ತು. ಈ ಬಗ್ಗೆ ಎ.ಐ.ಡಿ.ಎಸ್.ಓ ಅನೇಕ ಬಾರಿ ಪ್ರತಿರೋಧ ವ್ಯಕ್ತಪಡಿಸಿತ್ತು.

ಮುಚ್ಚಲ್ಪಡುತ್ತಿರುವ 9 ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು, ಬೋಧಕರು ಹಾಗೂ ಇತರೆ ಸಿಬ್ಬಂದಿ ಹೊಣೆ ಯಾರದ್ದು ? ಎಂದು ವಿದ್ಯಾರ್ಥಿ ಸಂಘಟನೆ ಸರ್ಕಾರಕ್ಕೆ ಪ್ರಶ್ನಿಸಿದೆ. ಶಿಕ್ಷಣ ಕ್ಷೇತ್ರದ ಯಾವುದೇ ನಿರ್ಧಾರವನ್ನು ಏಕಪಕ್ಷೀಯವಾಗಿ ಕೈಗೊಳ್ಳದೆ, ಬೋಧಕರು, ಪಾಲಕರು, ವಿದ್ಯಾರ್ಥಿಗಳು ಹಾಗೂ ಶಿಕ್ಷಣ ತಜ್ಞರನ್ನೊಳಗೊಂಡ ಪ್ರಜಾತಾಂತ್ರಿಕ ಪ್ರಕ್ರಿಯೆ ಅನುಸರಿಸುವಂತೆ ಸರ್ಕಾರಕ್ಕೆ ಆಗ್ರಹಿಸುತ್ತದೆ.

# ಅನಿಶ್ಚಿತ ಬದುಕಿಗೆ ಭಗವಂತನ ಅರಿವು ಅವಶ್ಯ

## ರಾಣೇಬೆನ್ನೂರಿನ 'ಶಿವ ದರ್ಶನ' ಪ್ರವಚನದಲ್ಲಿ ಶಿರಸಿಯ ಬ್ರಹ್ಮಾಕುಮಾರಿ ವೀಣಾಜೀ



ರಾಣೇಬೆನ್ನೂರು,ಫೆ.17- ಅನಿಶ್ಚಿತ ಬದುಕಿನ ಮನುಷ್ಯ ಶಿವಶರಣರ ವಚನಗಳನ್ನು ಅರ್ಥಮಾಡಿ ಕೊಂಡರೆ ಬದುಕಿಗೆ ಸಾರ್ಥಕತೆ ಸಿಗುತ್ತದೆ. ಆ ಮೂಲಕ ನಮ್ಮನ್ನ ನಾವು ಅರಿತು, ನಮ್ಮಲ್ಲಿರುವ ಭಗವಂತನನ್ನು ಕಾಣುವುದರೊಂದಿಗೆ ಬದುಕು ಸಾಗಿಸಬೇಕು ಎಂದು ಶಿರಸಿಯ ರಾಜಯೋಗಿನಿ ಬ್ರಹ್ಮಾಕುಮಾರಿ ವೀಣಾ ಹೇಳಿದರು.

ಇಲ್ಲಿನ ನಗರಸಭೆ ಕ್ರೀಡಾಂಗಣದಲ್ಲಿ ಪ್ರಜಾಪಿತ ಬ್ರಹ್ಮಾಕುಮಾರಿ ವಿಶ್ವವಿದ್ಯಾಲಯ ಏರ್ಪಡಿಸಿರುವ 89ನೇ ಶಿವರಾತ್ರಿ ಆಚರಣೆಯ ಮೂರು ದಿನಗಳ 'ಶಿವ ದರ್ಶನ' ಪ್ರವಚನ ಮಾಲೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ತಂದೆ-ತಾಯಿ ಜೀವ ಕೊಟ್ಟರೆ, ಬದುಕು ಕೊಟ್ಟವ ಭಗವಂತ. ತನ್ನ ಅರಿವೇ ತನಗೆ ಗುರು ಎನ್ನುವ ವಾಸ್ತವ ಅರಿತು ಜ್ಞಾನಿಯಾದರೆ ಜೀವನ ಪಾವನವಾಗಲಿದೆ. ನಮ್ಮ ಅನಿಶ್ಚಿತ ಬದುಕಿಗೆ ಇದು ಮಾರ್ಗದರ್ಶನವಾಗಲಿದೆ ಎಂದು ಅವರು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶಾಸಕ ಪ್ರಕಾಶ ಕೋಳಿವಾಡ, ಮನುಷ್ಯನ ಅಜ್ಞಾನ ದೂರವಾಗಲು ಅಧ್ಯಾತ್ಮದ ಶಿಕ್ಷಣ ಅವಶ್ಯವಿದೆ. ಈ ಪ್ರವಚನ ಮಾಲೆ ಸರ್ವರ ಅಜ್ಞಾನ ದೂರಾಗಿಸಿ, ಜ್ಞಾನದ ಬೆಳಕು ತರಲಿದೆ ಎಂದರು.

ವೇದಿಕೆಯಲ್ಲಿ ದಾನಿ ಹನುಮಂತಪ್ಪ ಕಾಕಿ, ಪಿಕೆಕೆ ಸಂಸ್ಥೆ ಅಧ್ಯಕ್ಷೆ ಪೂರ್ಣಿಮಾ ಕೋಳಿವಾಡ, ಜೆಡಿಎಸ್ ಜಿಲ್ಲಾಧ್ಯಕ್ಷ ಮಂಜುನಾಥ ಗೌಡಶಿವಣ್ಣನವರ, ನಿವೃತ್ತ ಸಬ್‌ಇನ್ಸ್‌ಪೆಕ್ಟರ್. ಕೆ.ಸಿ. ಕೋಮಲಾಚಾರಿ, ಜೇಸಿ ಅಧ್ಯಕ್ಷ ಕುಮಾರ ಬೆಣ್ಣೆ ಮತ್ತಿತರರಿದ್ದರು. ಬಿ.ಕೆ. ಶಿವದೇವಿ ಸ್ವಾಗತಿಸಿದರು. ಬಿ.ಕೆ. ಕಸ್ತೂರಿ ಕಾರ್ಯಕ್ರಮ ನಿರೂಪಿಸಿದರು. ಪ್ರಕಾಶ ಗಚ್ಚಿನಮಠ ಪ್ರಾರ್ಥಿಸಿದರು. ಸಕಲ ವಾದ್ಯವೃಂದದವರೊಂದಿಗೆ ವಿಶ್ವ ಏಕತಾ ಸದ್ಭಾವನಾ ಯಾತ್ರೆ ನಡೆಸಲಾಯಿತು.


## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ದಾವಣಗೆರೆ ಸಿಟಿ, 1ನೇ ಮುಖ್ಯ ರಸ್ತೆ, 7ನೇ ತಿರುವು, # 2625/2ರ ವಾಸಿಯಾದ **ಶ್ರೀ ಆದಿತ್ಯ ಎಂ. ಚಿಗಟೇರಿ ಬಿನ್ ಮುರುಘರಾಜೇಂದ್ರ. ಜೆ. ಚಿಗಟೇರಿ** (ಮೊ.ನಂ.99862-93328) ಇವರ ಪರವಾಗಿ ಸಾರ್ವಜನಿಕ ಪ್ರಕಟಣೆ ಏನೆಂದರೆ;

ನಮ್ಮ ಕಕ್ಷಿದಾರರು ಕೆಳಕಂಡ ಷೆಡ್ಯೂಲ್‌ನಲ್ಲಿ ಕಾಣಿಸಿರುವ ಜಮೀನನ್ನು ಹಾಲಿ ಖಾತೆದಾರರಾದ ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ದೊಡ್ಡಬಾತಿ ಗ್ರಾಮದ ವಾಸಿಯಾದ **ಶ್ರೀಮತಿ ರೇಣುಕಮ್ಮ ಕೋಂ ಮಹದೇವಪ್ಪ ಮತ್ತು ಶ್ರೀ ಮಹದೇವಪ್ಪ ಬಿನ್ ಸೊಂಡೆಪ್ಪ ರಂಗಪ್ಪ ಮತ್ತು ಅವರ ಮಕ್ಕಳುಗಳಿಂದ** ಕ್ರಯಕ್ಕೆ ಪಡೆಯಲು ಇಚ್ಚಿಸಿದ್ದು, ಸದರಿ ಜಮೀನಿನ ಬಗ್ಗೆ ಬೇರೆ ಯಾರದೇ ಆಗಲೀ ತಂಟೆ - ತಕರಾರು ಅಥವಾ ಯಾವುದೇ ರೀತಿಯ ಹಕ್ಕು ಬಾಧ್ಯತೆ ಇದ್ದಲ್ಲಿ, ಸದರಿ ಜಮೀನಿನ ಬಗ್ಗೆ ಯಾವುದೇ ರೀತಿಯ ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಿದ್ದಲ್ಲಿ, ಯಾವುದೇ ರೀತಿಯ ಕ್ರಯದ ಕರಾರು ಮಾಡಿಕೊಂಡಿದ್ದಲ್ಲಿ, ಯಾವುದೇ ಅಡಮಾನ ಸಾಲವಿದ್ದಲ್ಲಿ ಅಥವಾ ಯಾವುದೇ ಜೀವನಾಂಶದ ಹಕ್ಕಿಗೆ ಅಥವಾ ಪಾಲು ವಿಭಾಗದ ಹಕ್ಕಿಗೆ ಒಳಪಟ್ಟಿದ್ದಲ್ಲಿ ಈ ಪ್ರಕಟಣೆ ಪ್ರಕಟಗೊಂಡ ಮೂರು ದಿನಗಳ ಒಳಗಾಗಿ ಈ ಮೇಲ್ಕಂಡ ನನ್ನ ಕಕ್ಷಿದಾರರನ್ನಾಗಲೀ ಅಥವಾ ಅವರ ವಕೀಲರನ್ನು ಸೂಕ್ತ ದಾಖಲೆಗಳೊಂದಿಗೆ ಸಂಪರ್ಕಿಸತಕ್ಕದ್ದು, ಮೂರು ದಿನದೊಳಗಾಗಿ ಯಾವುದೇ ರೀತಿಯ ತಕರಾರು ಬಾರದಿದ್ದಲ್ಲಿ ನಮ್ಮ ಕಕ್ಷಿದಾರರು ಸದರಿ ಜಮೀನನ್ನು ಬೇರೆ ಯಾವುದೇ ವ್ಯಕ್ತಿಗಳ ಹಕ್ಕು ಹಿತಾಸಕ್ತಿ ಒಳಪಟ್ಟಿರುವುದಿಲ್ಲ ಎಂದು ಪರಿಗಣಿಸಿ ತಮ್ಮ ಹೆಸರಿಗೆ ನೋಂದಾಯಿಸಿಕೊಳ್ಳಲು ಹಕ್ಕುಳ್ಳವರಾಗಿರುತ್ತಾರೆ. ಆ ನಂತರ ಬಂದ ಯಾವುದೇ ತಕರಾರನ್ನು ಪರಿಗಣಿಸಲಾಗುವುದಿಲ್ಲ ಎಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಲಾಗಿದೆ.

**ಷೆಡ್ಯೂಲ್ :** ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ದೊಡ್ಡಬಾತಿ ಗ್ರಾಮದ ಸ.ನಂ.232/7ರಲ್ಲಿ ವಿಸ್ತೀರ್ಣ 01 ಎಕರೆ 20 ಗುಂಟೆ (01-20) ಜಮೀನಿಗೆ ಚಕ್ಕುಬಂದಿ :- **ಪೂರ್ವಕ್ಕೆ :** ಮಂಜುಳ ಎಸ್. ಎಂ. ಕೋಂ ರೇವಣಸಿದ್ದಪ್ಪ ಇವರಿಗೆ ಸೇರಿದ ಸ.ನಂ. 232/5ರ ಜಮೀನು. **ಪಶ್ಚಿಮಕ್ಕೆ :** ಶಾಕುಂತಲಮ್ಮ ಇವರಿಗೆ ಸೇರಿದ ಸ.ನಂ.232/2ಎ ರ ಜಮೀನು. **ಉತ್ತರಕ್ಕೆ :** ರಸ್ತೆ. **ದಕ್ಷಿಣಕ್ಕೆ :** ಸ.ನಂ.230/1ರ ಜಮೀನು.

**ಆರ್.ಟಿ. ವಿನಯಕುಮಾರ್,** ವಕೀಲರು
#1862/19, 4ನೇ ಮೇನ್, ಹೆಚ್.ಆರ್.ಬಿ. ನಗರ, ಸೆಂಟ್ ಜಾನ್ಸ್ ಹೈಸ್ಕೂಲ್ ಹತ್ತಿರ, ಶಿವಕುಮಾರ ಸ್ವಾಮಿ ಬಡಾವಣೆ 1ನೇ ಹಂತ, ದಾವಣಗೆರೆ-577 005.
**ಮೊ. : 9844597838** gmail : ajjihallivinay@gmail.com

# ಹಲವು ಗೊಂದಲಗಳ ಸಾಮಾನ್ಯ ಸಭೆ



**(1ನೇ ಪುಟದಿಂದ)** ನಗರಪಾಲಿಕೆಗೆ ಸೇರಿದ ಜಾಗ ನಮ್ಮದು ಎಂದು ಹೇಳುತ್ತಿರುವ ಬಗ್ಗೆ ಸಾಮಾನ್ಯ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೆ. ಸರ್ವೆ ನಡೆಸಿ, ದಾಖಲೆಗಳನ್ನು ಪರಿಶೀಲಿಸಿ, ಜಾಗ ನಮ್ಮದು ಎಂದು ನಾಮಫಲಕ ಹಾಕಿರುವುದಾಗಿ ಆಯುಕ್ತರಾದ ರೇಣುಕ ತಿಳಿಸಿದರು.

ಆದರೂ ಈಗ ಜಾಗ ನಮ್ಮದು ಎಂದು ರುಜುವಾತು ಆದ ನಂತರ ಸರ್ಕಾರಿ ಜಾಗ ಎಂಬುದಾಗಿ ಬೋರ್ಡ್ ಹಾಕಿರುವುದಾಗಿ ಹೇಳಿದರು.

ಆದರೂ ಈಗ ಜಾಗ ನಮ್ಮದೇ ಎಂದು ಸರ್ವೇ ಮಾಡಿಸಿ, ಕ್ಲೀನ್ ಮಾಡಿಸುತ್ತಿದ್ದಾರೆ ಎಂದು ಉಮಾ ಪ್ರಕಾಶ್ ತಿಳಿಸಿದರು.

ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿ, ಸರ್ಕಾರಿ ಜಾಗ ಎಂದು ಬೋರ್ಡ್ ಹಾಕಿದ್ದರೂ ನಮ್ಮದು ಎಂದು ಕ್ಲೀನ್ ಮಾಡುತ್ತಿರುವವರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಆಯುಕ್ತರು ಇಂಜಿನಿಯರ್‌ಗೆ ಸೂಚನೆ ನೀಡಿದರು.

ಆವರಗೆರೆ ಗೋಶಾಲೆಯಿಂದ ಚಿಕ್ಕನಹಳ್ಳಿಯವರೆಗೆ ರಿಂಗ್ ರಸ್ತೆ ಅಭಿವೃದ್ಧಿಗೆ 39 ಕೋಟಿ ರೂ. ಮೀಸಲಿಟ್ಟಿರುವ ಬಗ್ಗೆ ವಿಪಕ್ಷ ನಾಯಕ ಆರ್.ಎಲ್. ಶಿವಪ್ರಕಾಶ್ ಆಕ್ಷೇಪವೆತ್ತಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸದಸ್ಯ ಎ.ನಾಗರಾಜ್ ಅವರು, ಜಿಲ್ಲಾ ಉಸ್ತುವಾರಿ ಸಚಿವರ ದೂರದೃಷ್ಟಿಯ ಯೋಜನೆ ರೂಪಿಸಿ, ಅನುದಾನ ಕಾಯ್ದಿರಿಸಿದ್ದಾರೆ ಎಂದು ಹೇಳುತ್ತಿದ್ದಂತೆ ಬಿಜೆಪಿ ಸದಸ್ಯ ಕೆ. ಪ್ರಸನ್ನಕುಮಾರ್ ಅವರು, ಚರಂಡಿ ಮೇಲೆ ಹಾಕಿರುವ ಹಾಸುಗಲ್ಲು ಹಾಕಿ ಜರ್ಮನ್ ಮಾದರಿ ವೃತ್ತ ಎನ್ನುತ್ತಿರುವುದು ದೂರದೃಷ್ಟಿಯೇ ಎಂದು ಪ್ರಸನ್ನಕುಮಾರ್ ಪ್ರಶ್ನಿಸಿದರು.

ಇದಕ್ಕೆ ಪ್ರತಿಯಾಗಿ ಕಾಂಗ್ರೆಸ್ ಸದಸ್ಯರಾದ ಎ.ನಾಗರಾಜ್, ಗಡಿಗುಡಾಳ್ ಮಂಜುನಾಥ್, ಅಬ್ದುಲ್ ಲತೀಫ್ ಅವರು, ಕೂಸು ಹುಟ್ಟುವುದಕ್ಕೆ ಮುಂಚಿತವಾಗಿಯೇ ಕುಲಾವಿ ಹೊಲಿಸಬೇಡಿ. ಕಾಮಗಾರಿ ಪೂರ್ತಿಯಾದ ನಂತರ ಜರ್ಮನ್ ವೃತ್ತದ ಬಗ್ಗೆ ಮಾತನಾಡಿ, ಬಿಜೆಪಿಯಲ್ಲಿನ ಸಚಿವರು, ಸಂಸದರು ಏನೂ ಮಾಡಲಿಲ್ಲ. ಅಡ್ಡದಿಡ್ಡಿ ರೈಲ್ವೆ ಸೇತುವೆ ನಿರ್ಮಿಸಿರುವುದೇ ಸಾಧನೆ ಎಂದು ಟೀಕಿಸಿದರು.

ಇದರಿಂದ ಕುಪಿತಗೊಂಡ ಪ್ರಸನ್ನಕುಮಾರ್ ಅವರು, 'ಕುಂಬಳಕಾಯಿ ಕಳ್ಳ ಅಂದ್ರೆ ಹೆಗಲು ಮುಟ್ಟಿ ನೋಡಿಕೊಂಡ್ರಂತೆ' ಎನ್ನುವ ಹಾಗೆ ನೀವ್ಯಾಕೆ ಬೆನ್ನು ಮುಟ್ಟಿಕೊಳ್ತೀರಿ ಎಂದಾಗ ಆಕ್ರೋಶಗೊಂಡ ಎ.ನಾಗರಾಜ್, ಗಡಿಗುಡಾಳ್ ಮಂಜುನಾಥ್ ಯಾರಿಗೆ ಕಳ್ಳ ಎಂದಿದ್ದು, ಈ ಮಾತನ್ನು ವಾಪಸ್ ಪಡೆಯಬೇಕು, ಕೂಡಲೇ ಕ್ಷಮೆಯಾಚಿಸಬೇಕೆಂದು ಆಗ್ರಹಿಸಿದರು.

ಮೇಯರ್ ಸೇರಿದಂತೆ, ಕಾಂಗ್ರೆಸ್ ಸದಸ್ಯರೆಲ್ಲರೂ ಅಸಂವಿಧಾನಿಕ ಪದ ಬಳಕೆ ಮಾಡಿದ ಬಿಜೆಪಿ ಸದಸ್ಯರಿಗೆ ಧಿಕ್ಕಾರ ಕೂಗಿದರು. ಇದಕ್ಕೆ ಪ್ರತಿಯಾಗಿ ಬಿಜೆಪಿ ಸದಸ್ಯರು ಜನರ ಹಣ ಲೂಟಿ ಮಾಡುತ್ತಿರುವ ಕಾಂಗ್ರೆಸ್ ಗೆ ದಿಕ್ಕಾರ ಎಂದು ಕೂಗಿದರು. ಈ ವೇಳೆ ಕೆಲ ಹೊತ್ತು ಗೊಂದಲದ ವಾತಾವರಣ ನಿರ್ಮಾಣವಾಗು ಸ್ವಲ್ಪ ಸಮಯ ಸಭೆ ಮುಂದೂಡಲಾಯಿತು. ಬಳಿಕ ಮತ್ತೆ ಸಭೆ ಮುಂದುವರೆಯಿತು.

ಸಭೆಯಲ್ಲಿ ಉಪ ಮೇಯರ್ ಸೋಗಿ ಶಾಂತಕುಮಾರ್, ಸ್ಥಾಯಿ ಸಮಿತಿ ಅಧ್ಯಕ್ಷರಾದ ಸವಿತಾ ಗಣೇಶ್ ಹುಲ್ಮನಿ, ಸುಧಾ ಇಟ್ಟಿಗುಡಿ ಮಂಜುನಾಥ್, ಆಶಾ ಉಮಾಶಂಕರ್, ಎ.ಬಿ. ರಹೀಂ, ಸುರಭಿ ಶಿವಮೂರ್ತಿ, ಎಲ್.ಡಿ. ಗೋಣೆಪ್ಪ, ಉಮಾ ಪ್ರಕಾಶ್, ಎಸ್.ಟಿ. ವೀರೇಶ್, ರೇಖಾ ಸುರೇಶ ಗಂಡಗಾಳೆ, ಯಶೋಧ ಹೆಗ್ಗಪ್ಪ ಮತ್ತಿತರರು ಭಾಗವಹಿಸಿದ್ದರು.

## ಗ್ಯಾಸ್ ಪೈಪ್‌ಲೈನ್ ಅಳವಡಿಕೆಗೆ ಅಧಿಕ ಶುಲ್ಕ : ಆಕ್ಷೇಪ

ನಗರದಾದ್ಯಂತ ಅಳವಡಿಸುತ್ತಿರುವ ಗ್ಯಾಸ್ ಪೈಪ್‌ಲೈನ್ ಗೆ ಕೇವಲ ಒಂದು ರೂ. ಗೆ ಒಂದು ಮೀಟರ್ ಶುಲ್ಕ ವಿದಿಸುತ್ತಿದ್ದು, ಇದು ಅತಿ ಕಡಿಮೆಯಾಗಿದೆ. ಆದರೆ ಜನ ಸಾಮಾನ್ಯರಿಗೆ ಒಂದು ಮೀಟರ್‌ಗೆ 1800 ರೂ. ಅಧಿಕ ಶುಲ್ಕ ವಿಧಿಸುತ್ತಿರುವ ಬಗ್ಗೆ ಪಾಲಿಕೆ ಬಿಜೆಪಿ ಸದಸ್ಯ ಕೆ.ಪ್ರಸನ್ನಕುಮಾರ್ ಆಕ್ಷೇಪ ವ್ಯಕ್ತಪಸಿದರು.

ಮಹಾನಗರ ಪಾಲಿಕೆ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಹೇಳಿದ ಮಾತುಗಳಿಂದ ಅಸಮಾಧಾನಗೊಂಡ ಕಾಂಗ್ರೆಸ್, ಬಿಜೆಪಿ ಸದಸ್ಯರು ಪಕ್ಷಾತೀತವಾಗಿ ಇಂಜಿನಿಯರ್‌ಗಳ ಮೇಲೆ ಮುಗಿಬಿದ್ದು ಅಸಮಾಧಾನ ಹೊರಹಾಕಿದರು.

ಕೊಡುವ ಸಂಬಳಕ್ಕಾದರೂ ಸರಿಯಾಗಿ ಕರ್ತವ್ಯ ನಿರ್ವಹಿಸಿ ಎಂದು ಮೇಯರ್ ಚಮನ್‌ಸಾಬ್ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಕಾಂಗ್ರೆಸ್ ಸದಸ್ಯ ಎ. ನಾಗರಾಜ್ ಮಾತನಾಡಿ, ಗ್ಯಾಸ್ ಪೈಪ್‌ಲೈನ್ ಅಳವಡಿಕೆ ಕೇಂದ್ರ ಸರ್ಕಾರದ ಯೋಜನೆ. ಆದರೆ ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರಿ ಜಾರಿಗೊಳಿಸಲಾಗುತ್ತಿದೆ. ನೀವು ವಿರೋಧಿಸಿ ಎಂದರು.

ಶುಲ್ಕ ಹೆಚ್ಚಳ ಮಾಡುವ ಜೊತೆಗೆ ವಾರ್ಡ್‌ಗಳಿಗೆ ಪೈಪ್‌ಲೈನ್ ಅಳವಡಿಕೆಗೆ ಅನುಮತಿ ನೀಡಬೇಡಿ ಎಂದು ಆಯುಕ್ತರಿಗೆ ಸೂಚನೆ ನೀಡಿದರು.

# ಗ್ರಾಮಗಳಲ್ಲಿ ಸೌಹಾರ್ದತೆಗೆ ಮಹತ್ವ ನೀಡಿ

**(1ನೇ ಪುಟದಿಂದ)** ಜನರ ಮನಸ್ಸು ಕಟ್ಟುವುದು ಕಷ್ಟ ಎಂದರು.

ಹೊಸದುರ್ಗದ ಶ್ರೀ ಕನಕ ಗುರುಪೀಠ ಶಾಖಾ ಮಠದ ಈಶ್ವರಾನಂದಪುರಿ ಸ್ವಾಮೀಜಿ ಮಾತನಾಡುತ್ತಾ, ಧರ್ಮಕ್ಕೆ ಬೇರೇನೂ ವ್ಯಾಖ್ಯಾನ ಕೊಡುವುದು ಬೇಡ. ಕೂಡಿ ಬಾಳುವುದೇ ನಿಜವಾದ ಧರ್ಮ. ಗ್ರಾಮಗಳಲ್ಲಿ ಸಾಮರಸ್ಯ ಬಹಳ ಮುಖ್ಯವೇ ಹೊರತು, ಜಾತಿಯಲ್ಲ. ಇಂದಿನ ಕಾರ್ಯಕ್ರಮದಲ್ಲಿ ಎಲ್ಲರೂ ಒಟ್ಟಾಗಿ ಭಾಗವಹಿಸಿರುವುದು ಸಾಮರಸ್ಯದ ಗ್ರಾಮ ಎನ್ನುವುದಕ್ಕೆ ಸಾಕ್ಷಿಯಾಗಿದೆ ಎಂದರು.

ಶಬರಿಗೆ ಶ್ರೀ ರಾಮ ಒಲಿದ, ಕನಕನಿಗೆ ಶ್ರೀ ಕೃಷ್ಣ ಒಲಿದ ಅವರು ಜಾತಿ ನೋಡಲಿಲ್ಲ. ಭಕ್ತಿ ನೋಡಿ ಒಲಿದರು. ಭಕ್ತನಿಗೆ ಅಥವಾ ಭಕ್ತಿಗೆ ಯಾವ ಜಾತಿಯೂ ಇಲ್ಲ. ಈ ಹಿನ್ನೆಲೆಯಲ್ಲಿ ಪ್ರತಿ ಗ್ರಾಮದಲ್ಲೂ ಸಾಮರಸ್ಯ ಇರಬೇಕು ಎಂದರು.

ದೇವಲಾಯದಲ್ಲಿ ಭಕ್ತಿ, ವಿದ್ಯಾಲಯದಲ್ಲಿ ಜ್ಞಾನ ಪ್ರಾಪ್ತಿಯಾಗುತ್ತದೆ. ಭಕ್ತಿ ಹಾಗೂ ಜ್ಞಾನ ಎರಡೂ ಅತಿ ಮುಖ್ಯವಾದದ್ದು. ಮೂಢ ನಂಬಿಕೆ ಕೈಬಿಡಿ. ದುಂದುವೆಚ್ಚ ಕಡಿಮೆ ಮಾಡಿ ಎಂದು ಹೇಳಿದರು.

ಹೆಣ್ಣು ಮಕ್ಕಳಿಗೆ 18 ವರ್ಷಕ್ಕೆ ಮದುವೆ ಮಾಡಬೇಡಿ. ಅವರಿಗೆ ಉತ್ತಮ ಶಿಕ್ಷಣ ನೀಡಿರಿ. ಸ್ಪರ್ಧಾತ್ಮಕ ಪರೀಕ್ಷೆಗೆ ಪ್ರೋತ್ಸಾಹಿಸಿ. ಧರ್ಮದ ಕಡೆ ಮುಖ ಮಾಡಿ ಬದುಕನ್ನು ಸಾರ್ಥಕಗೊಳಿಸಿಕೊಳ್ಳಿ ಎಂದು ಕರೆ ನೀಡಿದರು.

ಹದಡಿಯ ಚಂದ್ರಗಿರಿ ಮಠದ ಮುರಳೀಧರ ಸ್ವಾಮೀಜಿ ಮಾತನಾಡಿ ಎಲ್ಲವನ್ನು ಕೊಟ್ಟ ದೇವರನ್ನು ಮರೆಯುತ್ತಿದ್ದೇವೆ. ನಿಸರ್ಗವನ್ನು ಹಾಳು ಮಾಡುತ್ತಾ, ಮಾಲಿನ್ಯ ಹೆಚ್ಚಿಸುತ್ತಿದ್ದೇವೆ. ನಮ್ಮಲ್ಲಿ ಭಯ ಮೂಡಿಸಲು ಹಿರಿಯರು ಊರಿಗೊಂದು ದೇವಸ್ಥಾನ ನಿರ್ಮಿಸಿದ್ದಾರೆ. ಆದರೆ ನಮ್ಮೊಳಗಿರುವ ದೇವರನ್ನು ನಾವು ಕಾಣಬೇಕು. ಮದಗಳನ್ನು ಕೈಬಿಡಬೇಕು. ಧರ್ಮ ಕಾರ್ಯ, ಪರೋಪಕಾರ ಗುಣ ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಶಾಸಕ ಕೆ.ಎಸ್. ಬಸವಂತಪ್ಪ ಮಾತನಾಡಿ, ಗ್ರಾಮಸ್ಥರು ದೇವಸ್ಥಾನಗಳಿಗೆ ಕೊಡುವಷ್ಟೇ ಮಹತ್ವವನ್ನು ಶಾಲೆಗಳಿಗೂ ನೀಡಬೇಕು ಎಂದು ಸಲಹೆ ನೀಡಿದರು. ಇಂದು ಮಕ್ಕಳಿಗೆ ವಿದ್ಯೆಯೇ ಮುಖ್ಯ. ವಿದ್ಯಾವಂತರಾದರೆ ಗ್ರಾಮವು ತಾನಾಗಿಯೇ ಅಭಿವೃದ್ಧಿ ಹೊಂದತ್ತದೆ. ಈ ಹಿನ್ನೆಲೆಯಲ್ಲಿ ಶಾಲೆಗಳಿಗೆ ಮಹತ್ವ ನೀಡುವಂತೆ ಹೇಳಿದರು.

ಇದೇ ವೇಳೆ ಗ್ರಾಮಸ್ಥರು, 4 ಸಾವಿರ ಜನ ಸಂಖ್ಯೆ ಇರುವ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು ಮಾಡಿಸಿಕೊಡಬೇಕು ಎಂದು ಶಾಸಕರಿಗೆ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದಪುರಿ ಸ್ವಾಮೀಜಿ, ಮೈಲಾರ ಕ್ಷೇತ್ರದ ಕಾರಣಿಕ ನುಡಿಯುವ ರಾಮಪ್ಪಜ್ಜ, ಹಳೆಕುಂದುವಾಡದ ಸ್ವಾಮೀಜಿ ರಾಜಣ್ಣ, ಮುಖಂಡರಾದ ಬಿ.ಜಿ. ಅಜಯಕುಮಾರ್, ಲೋಕಿಕೆರೆ ನಾಗರಾಜ್, ಶ್ರೀನಿವಾಸ ದಾಸಕರಿಯಪ್ಪ, ಎಚ್. ವೆಂಕಟೇಶ್, ಜೆ.ಎನ್. ಶ್ರೀನಿವಾಸ್. ಶ್ವೇತಾ ಶ್ರೀನಿವಾಸ್, ಮುದೇಗೌಡ್ರ ಗಿರೀಶ್, ತಹಸೀಲ್ದಾರ್ ಬಿ.ಎನ್. ಅಶ್ವತ್ಥ್, ದೇವಸ್ಥಾನ ಅಭಿವೃದ್ಧಿ ಸಮಿತಿ ಸದಸ್ಯರು, ಗ್ರಾಮದ ಮುಖಂಡರು, ಯುವಕರು, ಗ್ರಾಮಸ್ಥರು ಸೇರಿದಂತೆ ಇತರರಿದ್ದರು.

## ತಡವಾದರೂ ದೇಗುಲಗಳು ಉತ್ತಮವಾಗಿವೆ: ಎಸ್ಸೆಸ್ಸೆಂ

**ಗ್ರಾಮದವರು ತುಂಬಾ ಒಗ್ಗಟ್ಟಿನಿಂದ ದೇವಾಲಯ ನಿರ್ಮಾಣ ಮಾಡಿದ್ದಾರೆ. ತಡವಾಗಿಯಾದರೂ ಗ್ರಾಮದಲ್ಲಿ ದೇಗುಲಗಳು ಉತ್ತಮವಾಗಿ ನಿರ್ಮಿತವಾಗಿವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್‌ಎಸ್. ಮಲ್ಲಿಕಾರ್ಜುನ್ ಹೇಳಿದರು.**

**ದಾವಣಗೆರೆ- ಹಳೇ ಕುಂದುವಾಡ ಮುಖ್ಯ ರಸ್ತೆಗೆ ಹೊಂದಿಕೊಂಡ ರಸ್ತೆ ವ್ಯಾಜ್ಯ ನ್ಯಾಯಾಲಯದಲ್ಲಿದ್ದು, ಇದನ್ನು ತೆರವುಗೊಳಿಸಿದಲ್ಲಿ ಗ್ರಾಮಸ್ಥರು ಬಯಸಿದಂತೆ 80 ಅಡಿ ರಸ್ತೆ ನಿರ್ಮಾಣ ಮಾಡಲು ಬದ್ಧನಿದ್ದೇನೆ. ಈ ಸಂಬಂಧ ದೂಡಾ ಅಧಿಕಾರಿಗಳು, ಜಮೀನಿನ ಮಾಲೀಕರು, ಗುತ್ತಿಗೆದಾರರನ್ನು ಸೇರಿಸಿ ಸಭೆ ನಡೆಸೋಣ ಎಂದು ಹೇಳಿದರು.**

## ನಿಂಬೆ ಹಣ್ಣು ಬೇಡ, ಕಾಣಿಕೆ ಕೊಡಿ

ಒಮ್ಮೆ ತರೀಕೆರೆಯ ಭಕ್ತರು ಸಿರಿಗೆರೆಯ ಹಿಂದಿನ ಹಿರಿಯ ಲಿಂ.ಜಗದ್ಗುರುಗಳಿಗೆ ಒಂದು ಮಾಲೆ ಹಾಕಿ ನಮಸ್ಕರಿಸಿದರು. ಆಗ ಸ್ವಾಮೀಜಿ ಮಾಲೆಯನ್ನು ಪಕ್ಕಕ್ಕೆ ಇಟ್ಟು ಇದಕ್ಕೆ ಖರ್ಚು ಮಾಡುವ ಹಣವನ್ನು ನಮ್ಮ ಹುಂಡಿಗೆ ಹಾಕಿದ್ದರೆ ನೂರಾರು ಮಕ್ಕಳ ದಾಸೋಹಕ್ಕೆ ಅನುಕೂಲವಾಗುತ್ತಿತ್ತು ಎಂದರು. ನಂತರ ಭಕ್ತರು ಸ್ವಾಮೀಜಿಗೆ ಕಾಣಿಕೆ ನೀಡಿ ನಮಸ್ಕರಿಸಲು ಆರಂಭಿಸಿದರು.

ಕರ್ನಾಟಕದಲ್ಲಿ ಹೀಗೆ ಕಾಣಿಕೆ ಕೊಡುವುದನ್ನು ರೂಢಿ ಮಾಡಿದ್ದು ಸಿರಿಗೆರೆ ಮಠ. ನೀವು ನಮಗೆ ನಿಂಬೆ ಹಣ್ಣು ಕೊಟ್ಟು ನಮಸ್ಕರಿಸುತ್ತಿದ್ದೀರಿ. ಇದರ ಬದಲು ಕಾಣಿಕೆ ಕೊಟ್ಟು ನಮಸ್ಕರಿಸಿ. ಸಿರಿಗೆರೆ ಮಠದ ಶಿಸ್ತನ್ನು ಎಲ್ಲರೂ ರೂಢಿಸಿಕೊಳ್ಳಬೇಕು ಎಂದು ಹೊಸದುರ್ಗದ ಶ್ರೀ ಕನಕ ಗುರುಪೀಠ ಶಾಖಾ ಮಠದ ಶ್ರೀ ಈಶ್ವರಾನಂದಪುರಿ ಸ್ವಾಮೀಜಿ ಹೇಳಿದರು.

# ರ್‍ಯಾಪಿಡೋ ಬೈಕ್ ನಿಷೇಧಕ್ಕೆ ಆಗ್ರಹ

ದಾವಣಗೆರೆ, ಫೆ.17 - ನಗರದಲ್ಲಿ ಅನಧಿತವಾಗಿ ಕಾಲಿಟ್ಟಿರುವ ರ್‍ಯಾಪಿಡೋ ಬೈಕ್ ಟ್ಯಾಕ್ಸಿಯನ್ನು ಕೂಡಲೇ ನಿಷೇಧಿ ಸಬೇಕು. ಎಸ್ಪಿ ಹಾಗೂ ಜಿಲ್ಲಾಧಿಕಾರಿಗಳು ಅವರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ಚಾಲಕರ ಒಕ್ಕೂ ಟದ ಜಿಲ್ಲಾಧ್ಯಕ್ಷ ಪಿ.ಬಿ. ಅಂಜು ಕುಮಾರ್ ಒತ್ತಾಯಿಸಿದ್ದಾರೆ.

ಯಾವುದೇ ಅಧಿಕೃತ ಲೈಸೆನ್ಸ್ ಇಲ್ಲದ ಈ ಕಂಪನಿ ಬೆಂಗಳೂರಿನಲ್ಲಿ ಲಕ್ಷಾಂತರ ಆಟೋ ಮತ್ತು ಕಾರು ಚಾಲಕರ ಬದುಕನ್ನು ಹಾಳು ಮಾಡಿದೆ. ಈಗ ಕಳೆದ ಒಂದು ವಾರದಿಂದ ನಗರದಲ್ಲೂ ಕಾರ್ಯಾರಂಭ ಮಾಡಿದೆ. ಜಿಲ್ಲಾಡಳಿತ ಈ ಕಂಪನಿ ಮೇಲೆ ಕ್ರಮ ಕೈಗೊಳ್ಳ ದಿದ್ದರೆ ಕಾನೂನು ಹೋರಾಟ ನಡೆಸುವುದಾಗಿ ಹೇಳಿದರು.

ಆಟೋಹಾಗೂಕ್ಯಾಬ್‌ಗಾಗಿಸರ್ಕಾರದಿಂದಲೇ ಒಂದು ಆ್ಯಪ್ ಮಾಡುವುದಾಗಿ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿಯವರು ಘೋಷಿಸಿದ್ದರು. ಆದರೆ ಇದುವರೆಗೂ ಅದು ಸಾಧ್ಯವಾಗಿಲ್ಲ. ಕೂಡಲೇ ಆ್ಯಪ್ ರಚಿಸಿದರೆ ಸರ್ಕಾರಕ್ಕೂ ಆರ್ಥಿಕ ಸಂಪನ್ಮೂಲ ದೊರೆಯುತ್ತದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ಚಾಲಕರ ಒಕ್ಕೂಟದ ರಾಜ್ಯ ಸಂಚಾಲಕ ಡಿ.ಆರ್. ಅರವಿಂದಾಕ್ಷ, ಬಸವರಾಜ್, ಪ್ರಶಾಂತ್, ಗುರುರಾಜ್, ಬಸವರಾಜ್ ಎಂ, ಮಂಜುನಾಥ್, ಗಂಗಾಧರ್ ಬಿ.ಎಸ್., ಮನು, ಕಿರಣ್ ಕುಮಾರ್, ಸಿದ್ದೇಶ್ ಇತರರಿದ್ದರು.

# ಹೋರಾಟಗಳಿಂದ ಎಲ್ಲವೂ ಸಾಧ್ಯ : ಎಸ್ಸೆಸ್ಸೆಂ



**(1ನೇ ಪುಟದಿಂದ)** ದೇವಸ್ಥಾನದ ಅಭಿವೃದ್ಧಿ ಕಾರ್ಯಗಳು ಉತ್ತಮವಾಗಿ ಮೂಡಿ ಬಂದಿವೆ. ಈ ಹಿಂದೆ ನಗರ ಪ್ರದೇಶಕ್ಕೆ ಕುಡಿಯುವ ನೀರಿನ ಕೆರೆ ನಿರ್ಮಾಣ ಮಾಡುವಾಗಲು ತೊಡಕುಗಳು ಬಂದಿದ್ದವು, ಆಗಲು ಹಳೇ ಕುಂದುವಾಡ ಹಿರಿಯ ಗ್ರಾಮಸ್ಥರು ನನ್ನ ಬೆನ್ನು ತಟ್ಟಿ ಬೆಂಬಲಿಸಿದ್ದರಿಂದ ಈಗ ಕುಡಿಯುವ ಬೃಹತ್ ಘಟಕ ನಿರ್ಮಾಣ ಆಗಿದೆ. ಕಾಂಗ್ರೆಸ್ ಪಕ್ಷವು ಬಡವರ ಪಕ್ಷವಾಗಿದೆ. ದೀನ ದಲಿತರ, ದಮನಿತರ ಅಭಿವೃದ್ಧಿಗೆ ಉತ್ತಮ ಕಾರ್ಯಗಳು ಪಕ್ಷದಿಂದ ನಡೆಯುತ್ತಿವೆ. ಅಭಿವೃದ್ಧಿ ಕಾರ್ಯಗಳಿಗೆ ಕುಂದುವಾಡ ಸೇರಿದಂತೆ ಪ್ರತಿಯೊಬ್ಬರ ಸಹಕಾರವಿರಲಿ ಎಂದರು.

ರಾಷ್ಟ್ರೀಯ ಹೆದ್ದಾರಿಯವರು ರಸ್ತೆ ಕಾಮಗಾರಿಯ ವೇಳೆ ಅಂಡರ್ ಪಾಸ್ ಚಿಕ್ಕದಾಗಿ ಕಟ್ಟಿದ್ದಾರೆ ಎಂದು ಊರಿನವರು ಹೋರಾಟ ಮಾಡುತ್ತಿರುವಿರಿ. ಶಾಮನೂರು ಬಡಾವಣೆಯವರು ಹೋರಾಟ ಮಾಡಿದ ಫಲವಾಗಿ ಉತ್ತಮ ಅಂಡರ್ ಪಾಸ್ ರಸ್ತೆ ನಿರ್ಮಾಣವಾಗಿದೆ. ಅಧಿಕಾರಿಗಳು ಮಾತು ಕೇಳಬೇಕು ಎಂದರೆ ಹೋರಾಟವು ಅಗತ್ಯವಾಗಿದೆ. ಇಲ್ಲವಾದಲ್ಲಿ ಅಧಿಕಾರಿಗಳು ಮಾತು ಕೇಳುವುದಿಲ್ಲ ಎಂದು ತಿಳಿಸಿದ ಸಚಿವರು, ನಿಮ್ಮೆಲ್ಲರ ಹೋರಾಟಕ್ಕೆ ನಮ್ಮ ಬೆಂಬಲವು ಇದೆ ಎಂದರು.

## ಪ್ಯಾರಾ ಗ್ಲೈಡರ್ ಸವಾರಿ ಮಾಡಿದ ಕಾಲೇಜು ಯುವಕ

**(1ನೇ ಪುಟದಿಂದ)** ಕೆಲವೇ ನಿಮಿಷಗಳಿರುವಾಗ ನನಗೆ ಅರಿವಾಯಿತು ಎಂದು ಸಮರ್ಥ್ ಹೇಳಿದ್ದಾರೆ.

ಪಸರಾಣಿ ಎಂಬ ಹಳ್ಳಿಯಲ್ಲಿರುವ ಸಮರ್ಥ್ ಅವರಿಗೆ ಸ್ಥಳೀಯ ಪ್ಯಾರಾಗ್ಲೈಡಿಂಗ್ ಆಪರೇಟರ್‌ಗಳ ಪರಿಚಯ ಇತ್ತು. ತಮ್ಮ ಊರಿನಿಂದ ಪರೀಕ್ಷಾ ಕೇಂದ್ರಕ್ಕೆ ತೆರಳಲು ಸಂಚಾರದ ಸಮಸ್ಯೆ ಇತ್ತು. ಹೀಗಾಗಿ ಸ್ಥಳೀಯ ಪ್ಯಾರಾ ಗ್ಲೈಡಿಂಗ್ ಆಪರೇಟರ್ ನೆರವು ಪಡೆದಿದ್ದೆ. ಅವರು ನನ್ನನ್ನು ಐದು ಕಿಲೋಮೀಟರ್ ದೂರದ ಪರೀಕ್ಷಾ ಕೇಂದ್ರಕ್ಕೆ ತಲುಪಿಸಿದರು ಎಂದು ಸಮರ್ಥ್ ತಿಳಿಸಿದ್ದಾರೆ.

# ನಗರದಲ್ಲಿ ನಾಳೆ ಸಾಂಸ್ಕೃತಿಕ ಸ್ಪರ್ಧೆ

ದಾವಣಗೆರೆ, ಫೆ.17- ವನಿತಾ ಸಮಾಜದ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ನಗರದ ವನಿತಾ ಸಮಾಜದಲ್ಲಿ ಇದೇ ದಿನಾಂಕ 19ರಿಂದ 22ರ ವರೆಗೆ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

ನಾಡಿದ್ದು ದಿನಾಂಕ 19ರ ಬುಧವಾರ ಮಧ್ಯಾಹ್ನ 2.30ಕ್ಕೆ 'ಪ್ರಸ್ತುತ ಸ್ಥಿತಿಯಲ್ಲಿ ಹೆಣ್ಣು ಮದುವೆ ಮತ್ತು ಮಗು' ಎಂಬ ವಿಷಯಕ್ಕೆ ಸಂಬಂಧಿಸಿದಂತೆ 3ರಿಂದ 4 ನಿಮಿಷದ ಕನ್ನಡ ಭಾಷಣ ಸ್ಪರ್ಧೆ ನಡೆಯಲಿದೆ.

ದಿನಾಂಕ 20ರ ಗುರುವಾರ ಸಂಜೆ 4.30ಕ್ಕೆ ಪುರಂದರ ದಾಸರ ಪದಗಳ ಸ್ಪರ್ಧೆ ನಡೆಯಲಿದ್ದು, ಶೃತಿಯನ್ನು ಹೊರತು ಪಡಿಸಿ ಬೇರೆ ಏನು ಬಳಸಬಾರದು ಮತ್ತು ಒಂದು ಸಂಸ್ಥೆಯಿಂದ 5 ಮಹಿಳೆಯರು ಭಾಗವಹಿಸಬಹುದು.

ದಿನಾಂಕ 21ರ ಶುಕ್ರವಾರ ಬೆಳಗ್ಗೆ 11.00ಕ್ಕೆ ಯೋಗಾಸನ ಸ್ಪರ್ಧೆ ನಡೆಯಲಿದೆ ಮತ್ತು ದಿನಾಂಕ 22ರ ಶನಿವಾರ ಮಧ್ಯಾಹ್ನ 2.30ಕ್ಕೆ ರಸ ಪ್ರಶ್ನೆ ಸ್ಪರ್ಧೆ ನಡೆಯಲಿದೆ.

25 ವರ್ಷ ಮೇಲ್ಪಟ್ಟ ಮಹಿಳೆಯರಿಗೆ ಮಾತ್ರ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶ ಇರುತ್ತದೆ ಎಂದು ಪದ್ಮಪ್ರಕಾಶ್ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 9449811407.

# ಮಾರ್ಚ್ 7ರಂದು ಬಜೆಟ್ ಮಂಡನೆ

**(1ನೇ ಪುಟದಿಂದ)** ಮಂಡಿಸುವುದಾಗಿ ಹೇಳಿದರು.

ನನಗೆ ಕಾಲು ನೋವಿದ್ದರೂ ಬಜೆಟ್‌ನ ಪೂರ್ವ ಭಾವಿ ಸಿದ್ಧತೆ ಸಭೆಗಳನ್ನು ಸುದೀರ್ಘವಾಗಿ ನಡೆಸಿದ್ದೇನೆ.

ಇಂದು ರೈತ ಸಂಘಟನೆಗಳ ಜೊತೆ ಸಮಾಲೋಚಿಸಿದ್ದು, ಕೃಷಿಗೆ ಸಂಬಂಧಿಸಿದಂತೆ ಅವರ ಅಭಿಪ್ರಾಯ ಪಡೆದಿದ್ದೇನೆ, ಮುಂಗಡ ಪತ್ರದಲ್ಲಿ ಕೃಷಿಗೂ ಹೆಚ್ಚು ಆದ್ಯತೆ ನೀಡುವುದಾಗಿ ತಿಳಿಸಿದರು.

ಈ ವರ್ಷದ ಮೊದಲ ಅಧಿವೇಶನ ಆಗಿರುವುದರಿಂದ ರಾಜ್ಯಪಾಲರು ವಿಧಾನಮಂಡ ಲದ ಉಭಯ ಸದನಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ನಂತರ ಮೂರು ದಿನಗಳ ಕಾಲ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆ ನಡೆಯಲಿದ್ದು, ನಾನು ಮಾರ್ಚ್ 7ರ ಶುಕ್ರವಾರದಂದು ಬಜೆಟ್ ಮಂಡಿಸಲಿದ್ದೇನೆ, ಬಜೆಟ್ ಮೇಲಿನ ಚರ್ಚೆ ನಂತರ ಉತ್ತರ ಕೊಡಲಿದ್ದೇನೆ ಎಂದರು.

ಜಿಲ್ಲಾ, ತಾಲ್ಲೂಕು ಪಂಚಾಯತ್ ಚುನಾವಣೆ ನಡೆಸಲು ಸರ್ಕಾರ ಸಿದ್ಧವಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದ ಮುಖ್ಯಮಂತ್ರಿ, ಹೈಕೋರ್ಟ್ ಈ ಸಂಬಂಧ ನೀಡುವ ನಿರ್ದೇಶನ ದಂತೆ ನಡೆದುಕೊಳ್ಳುವುದಾಗಿ ಹೇಳಿದರು.

## ಬಜೆಟ್‌ನಲ್ಲಿ ಕೃಷಿಗೆ ಆದ್ಯತೆ

**(1ನೇ ಪುಟದಿಂದ) ಬೇಡಿಕೆಗಳನ್ನು ಹಂತ ಹಂತವಾಗಿ ಈಡೇರಿಸುತ್ತಲೇ ಬಂದಿರುವುದಾಗಿ ಹೇಳಿ ದರು. ವಿಧಾನಸೌಧದದಲ್ಲಿ ನಡೆದ 2025-26ನೇ ಸಾಲಿನ ಆಯವ್ಯಯ ಪೂರ್ವಭಾವಿ ಸಭೆ ವೇಳೆ, ವಿವಿಧ ರೈತ ಸಂಘದ ಮುಖಂಡರುಗಳ ಬೇಡಿಕೆಗಳ ಮನವಿಪತ್ರ ಸ್ವೀಕರಿಸಿ ಮಾತನಾಡಿದ ಅವರು, ರೈತರ ಹಿತ ಕಾಪಾಡಲು ಸರ್ಕಾರ ಸದಾ ಬದ್ಧವಾಗಿದೆ ಎಂದರು. ರೈತರನ್ನು ತೀವ್ರ ಸಂಕಷ್ಟಕ್ಕೆ ದೂಡುತ್ತಿರುವ ಹಾಗೂ ಭೂಮಿ, ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಿರುವ ಮೈಕ್ರೋ ಫೈನಾನ್ಸ್‌ಗಳ ಬಲವಂತದ ಸಾಲ ವಸೂಲಾತಿಗೆ ಸುಗ್ರೀವಾಜ್ಞೆ ಮೂಲಕ ಕಡಿವಾಣ ಹಾಕಿದ್ದಕ್ಕಾಗಿ ರೈತ ಮುಖಂಡರು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಿದರು.**

# ವಿಮೆ ಮಿತಿ 5 ಲಕ್ಷಗಳಿಗಿಂತ ಹೆಚ್ಚಿಸಲು ಪರಿಶೀಲನೆ

**(1ನೇ ಪುಟದಿಂದ)** ರೀತಿಯ ಸೌಲಭ್ಯ ನೀಡುತ್ತಾ ಬಂದಿದೆ. ಈ ಸಂಸ್ಥೆಯು ಬ್ಯಾಂಕುಗಳಿಂದ ಕಂತು ಪಡೆದು ಠೇವಣಿಗಳಿಗೆ ವಿಮೆ ನೀಡುತ್ತದೆ.

2020ರಲ್ಲಿ ಪಿಎಂಸಿ ಬ್ಯಾಂಕ್ ಹಗರಣ ನಡೆದ ನಂತರ ಠೇವಣಿ ವಿಮಾ ಮಿತಿಯನ್ನು ಒಂದು ಲಕ್ಷ ರೂ.ಗಳಿಂದ 5 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗಿತ್ತು.

# ಲಯನ್ಸ್‌ನಿಂದ ರಾಜ್ಯ ಮಟ್ಟದ ಚೆಸ್ ಪಂದ್ಯಾವಳಿ



ದಾವಣಗೆರೆ, ಫೆ. 17 - ದಾವಣಗೆರೆ ಲಯನ್ಸ್ ಕ್ಲಬ್ ಮತ್ತು ನ್ಯೂ ದಾವಣಗೆರೆ ಡಿಸ್ಟ್ರಿಕ್ಟ್ ಚೆಸ್ ಅಸೋಸಿಯೇಷನ್ ಇವರ ಸಂಯುಕ್ತಾಶ್ರಯದಲ್ಲಿ ನಗರದ ಲಯನ್ಸ್ ಭವನದಲ್ಲಿ ರಾಜ್ಯ ಮಟ್ಟದ ಚೆಸ್ ಪಂದ್ಯಾವಳಿ ನೆರವೇರಿತು.

ಸಮಾರಂಭದ ಅಧ್ಯಕ್ಷತೆಯನ್ನು ಚೆಸ್ ಅಸೋಸಿಯೇಷನ್ ಅಧ್ಯಕ್ಷರೂ ಆದ ಹಿರಿಯ ನ್ಯಾಯವಾದಿ ಎ.ಎಂ. ಹೆಗಡೆ ವಹಿಸಿದ್ದರು.

ಪಂದ್ಯಾವಳಿಯ ಉದ್ಘಾಟಕರಾಗಿ ಆಗಮಿಸಿದ್ದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎಂ. ಹೆಗಡೆ ಅವರು ಮಾತನಾಡಿ, ಮಕ್ಕಳ ಬೌದ್ಧಿಕ ವಿಕಾಸಕ್ಕೆ ಚದುರಂಗ ಆಟದ ಮಹತ್ವವನ್ನು ಕುರಿತು ಮತ್ತು ಶೈಕ್ಷಣಿಕವಾಗಿ ಮಕ್ಕಳ ಬೌದ್ಧಿಕ ಬೆಳವಣಿಗೆಯಲ್ಲಿ ಚೆಸ್ ಆಟದಿಂದ ಉಂಟಾಗುವ ಏಕಾಗ್ರತೆ ಕುರಿತು ಹೇಳಿದರು.

ಮುಖ್ಯ ಅತಿಥಿಗಳಾಗಿ ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ್ ಶೆಟ್ಟಿ, ಲಯನ್ಸ್ ಅಧ್ಯಕ್ಷ ಎಸ್.ಜಿ. ಉಳುವಯ್ಯ, ಕಾರ್ಯದರ್ಶಿ ಸಿ. ಅಜಯ್ ನಾರಾಯಣ್, ಶಿಕ್ಷಣ ಇಲಾಖೆಯ ಉಪನಿರ್ದೇಶಕ ಜಿ. ಕೊಟ್ರೇಶ್, ಡಾ. ಎಸ್.ಆರ್. ಹೆಗಡೆ, ಎಂ.ಎಸ್. ಮೃತ್ಯುಂಜಯ, ಮದನ್ ಕುಮಾರ್, ಲ. ಬೆಳ್ಳೂಡಿ ಶಿವಕುಮಾರ್, ಸತೀಶ್, ಸತೀಶ್ ಚಂದ್ರ, ಶ್ರೀಪಾದ್ ಭಾಗವಹಿಸಿದ್ದರು. ಶ್ರೀಮತಿ ನಿರ್ಮಲ ಮತ್ತು ಶ್ರೀಮತಿ ವಿದ್ಯಾ ಕಾರ್ಯಕ್ರಮ ನಿರೂಪಿಸಿದರು.


**ಮಳಿಗೆಗಳು ಮಾರಾಟಕ್ಕಿವೆ**
ಬಾಡಿಗೆ ಬರುವಂತಹ ಮಳಿಗೆಗಳು ಮಾರಾಟಕ್ಕಿವೆ. ಸಿತಾರ ಬಾರ್ ಹತ್ತಿರ ನಾಲ್ಕು ಮಳಿಗೆಗಳು 11x24 ಸೈಜಿನ ಮೂರು 6x24 ಸೈಜಿನ ಒಂದು.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಶನೇಶ್ವರ ದೇವಸ್ಥಾನದ ಹಿಂಭಾಗ ವಿಜನ್ ಇಂಟರ್ ನ್ಯಾಷನಲ್ ಸ್ಕೂಲ್ ಹತ್ತಿರ 30x40, 30x40 East ಅಕ್ಕ-ಪಕ್ಕ, Rate - 2600/-
ದಕ್ಷಿತ್ ಐನಳ್ಳಿ ಏಜೆಂಟ್
96061 26471

**ಬಿಟಿ ಗಲ್ಲಿಯಲ್ಲಿ ಮಳಿಗೆ ಬಾಡಿಗೆಗೆ ಇವೆ**
ಬ್ಯಾಡಗಿ ಪುಟ್ಟಪ್ಪ ಕಾಂಪ್ಲೆಕ್ಸ್‌ನಲ್ಲಿ 12x13 ಅಳತೆಯಲ್ಲಿ ಮಳಿಗೆಗಳು ಬಾಡಿಗೆಗೆ ಇವೆ. ಸಂಪರ್ಕಿಸಿ :
ಬಿ.ಪಿ. ವೀರಣ್ಣ 94482 48393
ಬಿ.ಪಿ. ಜಯರಾಜ್ 94492 24121

**ತಕ್ಷಣ ಬೇಕಾಗಿದ್ದಾರೆ**
ಭತ್ತ ಕೊಯ್ಯುವ ಯಂತ್ರ ನೋಡಿಕೊಳ್ಳಲು SSLC & PUC ಓದಿರುವ ಹಿಂದಿ ಭಾಷೆಯುಳ್ಳ ಯುವಕರು ಬೇಕಾಗಿದ್ದಾರೆ. (ಸೂಪರ್ ವೈಸರ್) ಊಟ, ವಸತಿ ಆಕರ್ಷಕ ಸಂಬಳ.
ಬೈಕ್‌ವುಳ್ಳವರಿಗೆ ಮೊದಲ ಆದ್ಯತೆ.
94823 89317, 78996 10253

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಪುರುಷ ಅಭ್ಯರ್ಥಿಗಳಿಗೆ ಊಟ ಮತ್ತು ವಸತಿ ಸೌಲಭ್ಯವಿದೆ. ಸಂಪರ್ಕಿಸಿ :
98442 94446

**ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ**
ಸಾಯಿ ಇಂಟರ್ ನ್ಯಾಷನಲ್ ಹೋಟೆಲ್ ಹತ್ತಿರ 180x110 East ಸಬ್ ರಿಜಿಸ್ಟರ್ ಆಫೀಸ್ ಹತ್ತಿರ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ**
ಭಗೀರಥ ಸರ್ಕಲ್ ಹತ್ತಿರ 22.50x40, 22.50x40 South ಅಕ್ಕ-ಪಕ್ಕ, Rate - 7000/-
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆಗಳು ಮಾರಾಟಕ್ಕಿವೆ**
ಭಗೀರಥ ಸರ್ಕಲ್, ನಿಟ್ಟುವಳ್ಳಿ, ದಾವಣಗೆರೆ ಹತ್ತಿರ ಇರುವ 20x30 ಸೈಜಿನ ಮನೆಗಳು ಮಾರಾಟಕ್ಕಿವೆ. ಸಂಪರ್ಕಿಸಿ :
94484 39639

**ಮನೆ ಲೀಸ್‌ಗೆ ದೊರೆಯುತ್ತದೆ**
ಉತ್ತಮ ನೀರಿನ ಸೌಕರ್ಯ ಹೊಂದಿರುವ ಕೆ.ಬಿ. ಬಡಾವಣೆಯಲ್ಲಿರುವ ಮನೆ (ಸಸ್ಯಹಾರಿಗಳಿಗೆ ಮಾತ್ರ)
63615 12585

**ಬೇಕಾಗಿದ್ದಾರೆ**
ನಮ್ಮ ಶೋರೂಂನಲ್ಲಿ ಸೇಲ್ಸ್ ಮಾಡಲು ಸೇಲ್ಸ್ ಎಕ್ಸಿಕ್ಯೂಟಿವ್ ಮತ್ತು ಹೆಲ್ಪರ್ ಬೇಕಾಗಿದ್ದಾರೆ. ಪರಿಚಯದೊಂದಿಗೆ ಸಂಪರ್ಕಿಸಿ :
ಗಂಗಾವತಿ ಸಿಲ್ಕ್ ಸ್ಯಾರೀ ಸೆಂಟರ್
ಬಿನ್ನಿ ಕಂಪನಿ ರೋಡ್ ದಾವಣಗೆರೆ 577001

**ಸೈಟು ಮತ್ತು ಜಮೀನು ಮಾರಾಟಕ್ಕಿದೆ**
ರಾಣೇಬೆನ್ನೂರಿನಲ್ಲಿ ದಕ್ಷಿಣ ದಿಕ್ಕಿನ 80/40 ಎರಡು ಸೈಟುಗಳು ಉತ್ತರ - ಪೂರ್ವ ಕಾರ್ನರ್ 30/40 ಒಂದು ಸೈಟುಗಳು ಹಾಗೂ 6 ಎಕರೆ ಕೆಂಪು ಮಣ್ಣಿನ ಜಮೀನು ಮಾರಾಟಕ್ಕಿದೆ.
ಶ್ರೀ ಸಂಪರ್ಕಿಸಿ :
ಶ್ರೀ ಚಾಮುಂಡೇಶ್ವರಿ ಎಂಟರ್ ಪ್ರೈಸಸ್99726 94981,
91085 54727

**ಮಳಿಗೆ ಬಾಡಿಗೆಗೆ**
ಹದಡಿ ರಸ್ತೆ, ಆರೈಕೆ ಆಸ್ಪತ್ರೆ ಎದುರು, ದಾವಣಗೆರೆ. ಗ್ರೌಂಡ್ ಫ್ಲೋರ್‌ನ ಮಳಿಗೆ ಬಾಡಿಗೆಗೆ ದೊರೆಯುತ್ತದೆ.
97424 57556

**ನವಜೋಡಿ ಲಿಂಗಾಯತ ವಧು ವರ**
ನಮ್ಮಲ್ಲಿ ವಧುಗೆ ಯಾವುದೇ Fees ಇರುವುದಿಲ್ಲ
ನಮ್ಮಲ್ಲಿ ಲಿಂಗಾಯತ ವಧು-ವರ ಮಾಹಿತಿ ಇದ್ದು, ನಮಗೆ ನಿಮ್ಮ ವಿವರ ಕಳಿಸುವ ಮೂಲಕ ಮಾಹಿತಿ ಪಡೆಯಿರಿ. ಇಂದೇ ನೋಂದಾಯಿಸಿ
9480 949180
All Over Karnataka

**ಬೇಕಾಗಿದ್ದಾರೆ**
ಕ್ಲಿನಿಕ್‌ನಲ್ಲಿ ರಿಸೆಪ್ಷನಿಸ್ಟ್ (ಬೇಸಿಕ್ ಕಂಪ್ಯೂಟರ್ ಜ್ಞಾನ ಇರಲಿ) ಕೆಲಸ ಮಾಡಲು ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ. ಬೆಳಿಗ್ಗೆ 11ರಿಂದ ಸಂಜೆ 8ರ ಒಳಗೆ ಫೋನ್ ಮಾಡಿ ಸಂಪರ್ಕಿಸಿ:
91640 54547

**ಸೈಟ್‌ಗಳು ಮಾರಾಟಕ್ಕಿವೆ**
ಕುಂದವಾಡ ಕೆರೆ ಕಾಸಲ್ ಅಮರನಾಥ್. ಹಳೆಯ ಪಟ್ಟಿ ಪಶ್ಚಿಮಕ್ಕೆ 4 ಸೈಟುಗಳು ಪೂರ್ವಕ್ಕೆ 1 ಸೈಟ್ ಮಾರಾಟಕ್ಕಿವೆ
99807 28487

**ಡ್ರೈವರ್ಸ್ ಮತ್ತು ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ**
ಆಕರ್ಷಕ ಸಂಬಳವಿರುತ್ತದೆ.
81056 99985
89715 04492

**ಸೈಟುಗಳು ಮಾರಾಟಕ್ಕಿವೆ**
ಯರಗುಂಟೆಯ ಹೊಸ ಲೇಔಟ್‌ನಲ್ಲಿ 30x40 ಮತ್ತು 30x45 ಸೈಜ್ ಸೈಟುಗಳು ಮಾರಾಟಕ್ಕಿವೆ.
92414 62457

**ಜಾಗ ಮಾರಾಟಕ್ಕಿದೆ**
ಶಿರಮಗೊಂಡನಹಳ್ಳಿ ಹತ್ತಿರ 10,000 ಅಡಿ ಕಮರ್ಷಿಯಲ್ ಜಾಗ ಮಾರಾಟಕ್ಕೆ ಇದೆ. ಕುಂದುವಾಡದಲ್ಲಿ ಇನ್‌ವೆಸ್ಟ್‌ಮೆಂಟ್ ಸೈಟ್ 30x40 ಪೂರ್ವ - ಪಶ್ಚಿಮ
97315 12365
99862 34416

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ಸಂಪೂರ್ಣ ಮನೆ ಕೆಲಸ ಹಾಗೂ ಅಡುಗೆ ಕೆಲಸ ಮಾಡಲು ಸುಮಂಗಲಿ ಮಹಿಳೆಯರು ಬೇಕಾಗಿದ್ದಾರೆ.
ಸಂಪರ್ಕಿಸಿ : 5ನೇ ಕ್ರಾಸ್ ಕುವೆಂಪು ನಗರ ಎಂಸಿಸಿ 'ಬಿ' ಬ್ಲಾಕ್ ಬಾಪೂಜಿ ಸ್ಕೂಲ್ ಪಕ್ಕದ ರಸ್ತೆ
ನಂದೀಶ್ 81470 09176
ನರೇಶ್ 63623 96731

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ ಬಾಪೂಜಿ ಆಸ್ಪತ್ರೆಯಲ್ಲಿ 8 ಗಂಟೆ ಹಾಗೂ ದಾವಣಗೆರೆಯ ಸುತ್ತ-ಮುತ್ತಲಿನಲ್ಲಿ 12 ಗಂಟೆ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ತಕ್ಷಣ ಬೇಕಾಗಿದ್ದಾರೆ. ಸಂಪರ್ಕಿಸಿ :
ಅಸೋಸಿಯೇಟೆಡ್ ಎಂಟರ್ ಪ್ರೈಸಸ್, ಗಣೇಶ್ ಲೇಔಟ್, ದಾವಣಗೆರೆ. 90605 45500
97390 89022, 99169 29713

**ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ**
SAI SRI INDUSTRIES
Near Sub Register Office, Behind MRF Tyres Showroom.
98862 55308, 96111 14244

**ಡ್ರೈವರ್ ಬೇಕಾಗಿದ್ದಾರೆ**
ಆನಗೋಡು ಸಮೀಪ NH-48 ನಲ್ಲಿ ಇರುವ BPCL ಪೆಟ್ರೋಲ್ ಬಂಕ್‌ನ 20KL ಟ್ಯಾಂಕರ್ ಲಾರಿಗೆ HAZARD ಇರುವ ಟ್ಯಾಂಕರ್ ಲಾರಿ ಚಾಲಕರು ಬೇಕಾಗಿದ್ದಾರೆ. ಸೂಕ್ತ ದಾಖಲೆಗಳೊಂದಿಗೆ ಸಂಪರ್ಕಿಸಿ :
90082 28222, 99001 42052

**ಶ್ರೀ ಮಾತಾ ಟ್ರಸ್ಟ್**
(Old Age Care Center)
ಶಾಸ್ತ್ರಿಹಳ್ಳಿ ತುಂಬಿಗೆರೆ ಅಂಚೆ ಸೀನಿಯರ್ ಸಿಟಿಜನ್ ಕೇರ್ ಸೆಂಟರ್ ನಮ್ಮಲ್ಲಿ 40 ವರ್ಷ ಮೇಲ್ಪಟ್ಟ ವಯೋವೃದ್ದರು/ವೃದ್ದೆಯರು ನಿವೃತ್ತಿ ಹೊಂದಿದವರು ಹಾಗೂ ಖಾಸಗಿ ಜೀವನ ನಡೆಸಲು ಇಚ್ಛೆ ಇರುವವರು, ನಮ್ಮ ಆರೈಕೆ ಕೇಂದ್ರಕ್ಕೆ ಸೇರಬಹುದು.
97319 93770, 99001 42052

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಸಾಯಿ ಎಗ್ ಸೆಂಟರ್‌ನಲ್ಲಿ ಆಟೋ ಡ್ರೈವರ್, ಟಾಟಾ ACE ಡ್ರೈವರ್ ಮತ್ತು ಅಂಗಡಿಯ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಉತ್ತೀರ್ಣ ಶಿವಪ್ಪ ಸರ್ಕಲ್, ದಾವಣಗೆರೆ.
96860 22969

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

**FOR SALE**
ಅತ್ಯುತ್ತಮ ಸ್ಥಿತಿಯಲ್ಲಿರುವ ಬೇಕರಿ ಸ್ವೀಟ್ ಕೌಂಟರ್ ಮಾರಾಟಕ್ಕಿದೆ. ಸಂಪರ್ಕಿಸಿ :
95388 96927

**ಉದ್ಯೋಗಾವಕಾಶ**
ಹೆಸರಾಂತ ಕಂಪನಿಯಾದ ಸಂಜೀವಿನಿ ಹೆಲ್ತ್‌ಕೇರ್‌ನಲ್ಲಿ (ಹೋಂ ನರ್ಸಿಂಗ್)
ವಯೋವೃದ್ದರನ್ನು ನೋಡಿಕೊಳ್ಳಲು ಯುವತಿಯರು, ಯುವಕರು ಹಾಗೂ ಮಹಿಳೆಯರು ಬೇಕಾಗಿದ್ದಾರೆ.
ಉಚಿತ ಊಟ, ವಸತಿ.ಸಂಬಳ 18,000 ರಿಂದ 25,000 ರೂ.ವರೆಗೆ
ವಿದ್ಯಾರ್ಹತೆ : 7th, 10th, PUC, ANM, GNM
76193 54274

**AdBlue / DEF**
available with Best Quality & Price for All BS6 Diesel
Commercial & Passanger Vehicles
Visit: Best Lubricants
Opp. to New Pvt Bus Stand PB Road, Davangere.
73380 33337

**WANTED**
* Telecaller's
* Sale's Executive's &
* Marketing Executive's
Age : 18 to 27 Salary+Incentive
Quali:PUC, Degree, Work place-Davanagere
Walk in Interview -Time:10.30 am-4 pm
99864 47909

**ಶ್ರೀ ಸಾಯಿಬಾಬ ಬೋರ್‌ವೆಲ್**
ಮನೆ ಒಳಗಡೆ ಹಾಗೂ ಹೊರಗಡೆ ಸ್ಟ್ಯಾಂಡ್ ಬೋರ್ 300 ಅಡಿಯಿಂದ 450 ಅಡಿ ವರೆಗೂ ಕೊರೆಯಲಾಗುವುದು.
99640 78484
95906 15776

# ಅನಿವಾಸಿಗಳು ತಾವಿರುವ ಸ್ಥಳದಲ್ಲೇ ಮತದಾನ ಮಾಡುವಂತಾಗಬೇಕು

## ನಿರ್ಗಮಿಸುತ್ತಿರುವ ಸಿಇಸಿ ರಾಜೀವ್ ಕುಮಾರ್

ನವದೆಹಲಿ, ಫೆ. 17 - ಅನಿವಾಸಿ ಭಾರತೀಯರು ತಾವಿರುವ ಸ್ಥಳದಲ್ಲೇ ಮತದಾನ ಮಾಡಲು ಅವಕಾಶ ನೀಡಬೇಕು ಹಾಗೂ ಮತಗಟ್ಟೆವಾರು ಮತದಾನ ಗೋಪ್ಯವಾಗಿರಿಸಲು ಟೋಟಲೈಸರ್ ವ್ಯವಸ್ಥೆ ಅಳವಡಿಸಿಕೊಳ್ಳಬೇಕು ಎಂದು ನಿರ್ಗಮಿಸುತ್ತಿರುವ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅಭಿಪ್ರಾಯಪಟ್ಟಿದ್ದಾರೆ. 65 ವರ್ಷ ತುಂಬಿದ ಹಿನ್ನೆಲೆಯಲ್ಲಿ ನಿವೃತ್ತರಾಗುತ್ತಿರುವ ಕುಮಾರ್, ವಲಸೆ ಮತದಾರರು ತಾವಿರುವ ಪ್ರದೇಶದಲ್ಲೇ ಮತದಾನ ಮಾಡುವಂತಾಗಲು ಸರ್ವಸಮ್ಮತಿ ರೂಪಿಸುವ ಅಗತ್ಯವಿದೆ ಎಂದಿದ್ದಾರೆ.

ಪ್ರಾಕ್ಸಿ ಮತದಾನ ತಡೆಯಲು ಮತಗಟ್ಟೆಗಳಲ್ಲಿ ಬಯೋಮೆಟ್ರಿಕ್ ಗುರುತಿನ ವ್ಯವಸ್ಥೆ ಅಳವಡಿಸಿಕೊಳ್ಳುವ ಬಗ್ಗೆಯೂ ಯೋಚಿಸಬೇಕಿದೆ ಎಂದವರು ಹೇಳಿದ್ದಾರೆ.

ರಾಜಕೀಯ ಪಕ್ಷಗಳು ಆನ್‌ಲೈನ್ ಮೂಲಕ ವೆಚ್ಚದ ವಿವರ ದಾಖಲಿಸುವ ವ್ಯವಸ್ಥೆ ಆರಂಭವಾಗಿದೆ. ಉತ್ತಮ ಹಣಕಾಸು ಪಾರದರ್ಶಕತೆ ಹಾಗೂ ವಿಶ್ಲೇಷಣೆಗಾಗಿ ಈ ವ್ಯವಸ್ಥೆ ಕಡ್ಡಾಯಗೊಳಿಸಬೇಕು ಎಂದವರು ಹೇಳಿದ್ದಾರೆ.

ರಾಜಕೀಯ ಭರವಸೆಗಳನ್ನು ಹಣಕಾಸು ವಿವರ ಪ್ರಕಟಿಸುವ ಮೂಲಕ ಖಚಿತಪಡಿಸಬೇಕು. ನ್ಯಾಯಾಲಯಗಳು ಈ ಬಗ್ಗೆ ತ್ವರಿತ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಕುಮಾರ್ ಹೇಳಿದ್ದಾರೆ.

ಅನಿಯಂತ್ರಿತ ಸಾಮಾಜಿಕ ಮಾಧ್ಯಮ ಅಲ್ಗೊರಿದಮ್‌ಗಳು ವಿಶ್ವದಾದ್ಯಂತ ಚುನಾವಣಾ ವ್ಯವಸ್ಥೆಗೆ ಗಂಭೀರ ಅಪಾಯ ತಂದಿವೆ. ಇಂತಹ ಸಮಸ್ಯೆಗಳನ್ನು ತಡೆಯಲು ಕ್ರಮಗಳ ಅಗತ್ಯವಿದೆ ಎಂದವರು ಹೇಳಿದ್ದಾರೆ.

ಚುನಾವಣಾ ಪ್ರಕ್ರಿಯೆಯಲ್ಲಿ ಸಂಪೂರ್ಣವಾಗಿ ಹಾಗೂ ಸಕ್ರಿಯವಾಗಿ ಭಾಗಿಯಾದ ನಂತರ ಫಲಿತಾಂಶದ ಬಗ್ಗೆ ಅನುಮಾನ ವ್ಯಕ್ತಪಡಿಸುವ ಬಗ್ಗೆಯೂ ಕುಮಾರ್ ವಿಷಾದಿಸಿದ್ದಾರೆ.

## ಆವರಗೊಳ್ಳದಲ್ಲಿ ಇಂದು ಗುಗ್ಗಳ

ದಾವಣಗೆರೆ ಸಮೀಪದ ಆವರಗೊಳ್ಳ ಗ್ರಾಮದ ಶ್ರೀ ವೀರಭದ್ರೇಶ್ವರ ಸ್ವಾಮಿಯ ರಥೋತ್ಸವದ ಪ್ರಯುಕ್ತ ಇಂದು ಬೆಳಗ್ಗೆ 8ಕ್ಕೆ ಸ್ವಾಮಿಯ ಗುಗ್ಗಳ ಸೇವೆ, ರಾತ್ರಿ 10 ಗಂಟೆಗೆ ಭಕ್ತರಿಂದ ಓಕಳಿ ಸೇವೆ ಮತ್ತು ಗಂಗಾ ಪೂಜೆ ನಡೆಯಲಿದೆ. ನಾಳೆ ಬುಧವಾರ ಬೆಳಿಗ್ಗೆ 8 ಗಂಟೆಗೆ ಸಕಲ ಬಿರುದಾವಳಿಗಳೊಂದಿಗೆ ಉಯ್ಯಾಲೆ ನಡೆಯಲಿದೆ.

# ಅಡ್ಡ ಪರಿಣಾಮಗಳಿಲ್ಲದ ಹೋಮಿಯೋಪತಿ ವೈದ್ಯ ಪದ್ಧತಿ



## ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ 50 ವಾರದ ಸಂಭ್ರಮಾಚರಣೆಯಲ್ಲಿ ಡಾ. ಆರತಿ ಸುಂದರೇಶ್

ದಾವಣಗೆರೆ, ಫೆ. 17 - ಹೋಮಿಯೋಪತಿ ವೈದ್ಯ ಪದ್ಧತಿಯು ಪ್ರಾರಂಭಗೊಂಡು ಸುಮಾರು 265 ವರ್ಷಗಳು ಕಳೆದಿದ್ದು, ಇಂದು ಆಧುನಿಕ ವೈದ್ಯ ಪದ್ಧತಿಗಳಲ್ಲಿ ಹೋಮಿಯೋಪತಿ ವೈದ್ಯ ಪದ್ಧತಿಗೆ ಪ್ರಮುಖ ಸ್ಥಾನವಿರುವುದು ಹೆಮ್ಮೆಯ ಸಂಗತಿ ಎಂದು ವೈದ್ಯರಾದ ಡಾ. ಆರತಿ ಸುಂದರೇಶ್ ಹೇಳಿದರು.

ಹೋಮಿಯೋಪತಿ ವೈದ್ಯ ಪದ್ಧತಿಯು ಸಂಪೂರ್ಣ ಅಡ್ಡ ಪರಿಣಾಮಗಳಿಲ್ಲದ ಒಂದು ವೈದ್ಯ ಪದ್ಧತಿ. ಈ ಪದ್ಧತಿಯಲ್ಲಿ ಕಾಯಿಲೆಗಳು ಸಂಪೂರ್ಣವಾಗಿ ಗುಣಪಡುತ್ತವೆ. ಬಡವರು ಹೆಚ್ಚಿನ ಪ್ರಮಾಣದಲ್ಲಿ ಉಚಿತ ಆರೋಗ್ಯ ಶಿಬಿರದ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ಅವರು ಕರೆ ನೀಡಿದರು.

ಹೋಮಿಯೋಪತಿ ವೈದ್ಯಕೀಯ ಸಂಘ (ದಾವಣಗೆರೆ) ಹಾಗೂ ಕರುಣಾ ಜೀವ ಕಲ್ಯಾಣ ಟ್ರಸ್ಟ್ ಇವರ ಜಂಟಿ ಆಶ್ರಯದಲ್ಲಿ ಪ್ರತಿ ತಿಂಗಳು ನಡೆಯುವ ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ 50 ವಾರದ ಸಂಭ್ರಮಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಕರುಣಾ ಟ್ರಸ್ಟಿನ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ಮಾತನಾಡಿ, ತಮ್ಮ ಅನಾರೋಗ್ಯದ ಸಂದರ್ಭದಲ್ಲಿ ಅಲೋಪತಿಯಿಂದ ಗುಣವಾಗದಿದ್ದಾಗ ಹೋಮಿಯೋಪತಿ ಚಿಕಿತ್ಸೆಯಿಂದಾಗಿ ಗುಣಪಡಿಸಿ ಕೊಂಡಿರುವುದರ ಬಗ್ಗೆ ಎಲ್ಲರೊಂದಿಗೆ ಹಂಚಿಕೊಂಡರು.

ಪ್ರತಿ ತಿಂಗಳು ಉಚಿತವಾಗಿ ನಡೆಯುವ ಆರೋಗ್ಯ ತಪಾಸಣಾ ಶಿಬಿರಕ್ಕೆ ಕಾರಣರಾದ ಡಾ. ಮಾವಿಶೆಟ್ಟರ್, ಡಾ. ಕೆ.ಆರ್. ಶರತ್‌ರಾಜ್, ಡಾ. ಸಿ.ಎನ್. ಕೋಟಿಹಾಳ್, ಡಾ. ಎ.ಎನ್.ಸುಂದರೇಶ್, ಡಾ. ಆರತಿ ಸುಂದರೇಶ್, ಡಾ. ಜಿ.ಎಸ್. ಗಿರೀಶ್, ಡಾ. ಎಸ್.ರಂಗರಾಜನ್. ಶ್ರೀಧರ್ ಮತ್ತು ನಾರಾಯಣ್ ಭಟ್‌ರವರ ಸತ್ಕಾರ್ಯಕ್ಕೆ ಡಾ. ಹಾನಿಮನ್ ಆರೋಗ್ಯ ಸೇವಾ ಪ್ರಶಸ್ತಿಯನ್ನು ಕೊಡುವುದರ ಮೂಲಕ ಕೃತಜ್ಞತಾ ಸಮರ್ಪಣೆ ಸಲ್ಲಿಸಿದರು.

ಡಾ. ಸಿ.ಎನ್. ಕೋಟಿಹಾಳ್ ಮಾತನಾಡಿ, ಹೋಮಿಯೋ ಚಿಕಿತ್ಸಾ ಪದ್ಧತಿಯಲ್ಲಿ ರೋಗಿಗಳ ಇತಿಹಾಸವನ್ನು ಸಂಪೂರ್ಣವಾಗಿ ತಿಳಿದುಕೊಂಡು ಚಿಕಿತ್ಸೆ ನೀಡಲಾಗುತ್ತದೆ ಮತ್ತು ರೋಗಿಗಳ ಮನಸ್ಸಿನಿಂದ ಉಂಟಾಗುವ ದೈಹಿಕ ಕಾಯಿಲೆಗಳಿಗೆ ಔಷಧ ನೀಡಲಾಗುತ್ತದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಡಾ. ಹೆಚ್.ಎನ್. ಮಲ್ಲಿಕಾರ್ಜುನ್ ಮಾತನಾಡಿ, ಅಲೋಪತಿ, ವೈದ್ಯ ಪದ್ದತಿ ಮತ್ತು ಹೋಮಿಯೊಪತಿ ವೈದ್ಯ ಪದ್ಧತಿಯೊಂದಿಗಿನ ಚಿಕಿತ್ಸಾ ಕ್ರಮದಲ್ಲಿನ ವ್ಯತ್ಯಾಸಗಳನ್ನು ಹೇಳಿ, ರೋಗಿಗಳು ಅವರವರ ದೇಹ ಪ್ರಕೃತಿಗೆ ಹೊಂದಿಕೊಳ್ಳುವ ವೈದ್ಯ ಪದ್ಧತಿಯನ್ನು ಅನುಸರಿಸಲು ತಿಳಿಸಿದರು.

ಟ್ರಸ್ಟಿನ ನಿರ್ದೇಶಕರಾದ ಶ್ರೀಮತಿ ಮಂಜುಳಾ ಬಸವಲಿಂಗಪ್ಪ ವಂದಿಸಿದರು, ನಿರ್ದೇಶಕ ಪ್ರೊ. ಎಂ. ಬಸವರಾಜ್, ಡಾ. ಹೆಚ್.ವಿ. ವಾಮದೇವಪ್ಪ, ಸಿ.ಜಿ. ದಿನೇಶ್, ಹೆಚ್.ಆರ್. ಉದಯ್ ಕುಮಾರ್, ಮಧುಸೂದನ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತಿಯಲ್ಲಿದ್ದರು.

# ಕೊಟ್ಟೂರು ಪಾದಯಾತ್ರಿಗಳಿಗೆ ನಾಳೆ ಬೀಳ್ಕೊಡುಗೆ



ದಾವಣಗೆರೆ, ಫೆ.17 - ಕೊಟ್ಟೂರು ಗುರುಬಸವ ರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ವತಿಯಿಂದ ನಾಡಿದ್ದು ದಿನಾಂಕ 19 ಮತ್ತು 20ರಂದು 46ನೇ ವರ್ಷದ ಸಮಗ್ರ ಪಾದಯಾತ್ರೆ, ಬೀಳ್ಕೊಡುವ ಸಮಾರಂಭ ಹಾಗೂ '27ನೇ ವರ್ಷದ ಔಷಧೋಪಚಾರ ಸೇವೆಯ ಸಮಾರೋಪ' ನಡೆಯಲಿದೆ.

ದಿನಾಂಕ 19ರ ಬುಧವಾರ ಸಂಜೆ 5 ಗಂಟೆಗೆ ನಗರದ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ದೇವಸ್ಥಾನ ಆವರಣದಲ್ಲಿ 46ನೇ ವರ್ಷದ ಸಮಗ್ರ ಪಾದಯಾತ್ರೆ ಬೀಳ್ಕೊಡುವ ಸಮಾರಂಭ ನಡೆಯಲಿದೆ. ಅಂದು ಹೆಬ್ಬಾಳು ವಿರಕ್ತ ಮಠದ ರುದ್ರೇಶ್ವರ ಶ್ರೀಗಳು, ವಿರಕ್ತ ಮಠದ ಡಾ. ಬಸವಪ್ರಭು ಸ್ವಾಮೀಜಿ, ಅಯ್ಯನಹಳ್ಳಿ ರಂಭಾಪುರಿ ಶಾಖಾ ಮಠದ ಮಹೇಶ್ವರ ಶಿವಾಚಾರ್ಯ ಶ್ರೀ, ಕೊಟ್ಟೂರು ಹಿರೇಮಠದ ಶಿವಪ್ರಕಾಶ ಸ್ವಾಮೀಜಿ ಹಾಗೂ ಕೋಣಂದೂರು ಬೃಹನ್ಮಠದ ಪಂಡಿತಾರಾಧ್ಯ ಶಿವಾಚಾರ್ಯ ಶ್ರೀಗಳು ಸಾನಿಧ್ಯವಹಿಸುವರು.

ಟ್ರಸ್ಟಿನ ಗೌರವಾಧ್ಯಕ್ಷ ಡಾ. ಅಥಣಿ ಎಸ್. ವೀರಣ್ಣ, ಶಾಸಕ ಶಾಮನೂರು ಶಿವಶಂಕರಪ್ಪ, ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಡಾ. ಪ್ರಭಾ ಮಲ್ಲಿಕಾರ್ಜುನ್, ಜಿ.ಎಂ. ಗಂಗಾಧರ ಸ್ವಾಮಿ ಭಾಗವಹಿಸುವರು.

ದಿನಾಂಕ 20ರ ಗುರುವಾರ ಸಂಜೆ 5 ಗಂಟೆಗೆ ಅರಸೀಕೆರೆ ಕೋಲಶಾಂತೇಶ್ವರ ವಿರಕ್ತಮಠದಲ್ಲಿ '27ನೇ ವರ್ಷದ ಔಷಧೋಪಚಾರ ಸೇವೆಯ ಸಮಾರೋಪ' ನಡೆಯಲಿದ್ದು, ಕೋಲಶಾಂತೇಶ್ವರ ವಿರಕ್ತ ಮಠದ ಶಾಂತಲಿಂಗ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು.

ಪಾದಯಾತ್ರೆ ಟ್ರಸ್ಟಿನ ಗೌರವಾಧ್ಯಕ್ಷ ಡಾ.ಅಥಣಿ ಎಸ್. ವೀರಣ್ಣ, ಜಿ.ಎ. ಗಂಗಾಧರ ಸ್ವಾಮಿ, ಜಿ.ಪಿ. ರವಿ ಪ್ರಸಾದ್, ಡಾ.ಕೆ. ಸಿದ್ದಪ್ಪ, ಎಂ.ಎಸ್. ಗೀತಾ, ಎಸ್.ಆರ್. ಪ್ರಸನ್ನ ಕುಮಾರ್, ಡಾ.ಬಿ.ಯು. ಯೋಗೇಂದ್ರ ಕುಮಾರ್ ಪಾಲ್ಗೊಳ್ಳಲಿದ್ದಾರೆ.

**ಪಾದಯಾತ್ರಿಗಳಿಗೆ ಶಾಮನೂರು ಪ್ರಕಾಶ್‌ರಿಂದ ನೀರಿನ ವ್ಯವಸ್ಥೆ :** ಶ್ರೀ ಗುರು ಬಸವೇಶ್ವರ ಸ್ವಾಮಿ ರಥೋತ್ಸವಕ್ಕೆ ತೆರಳುವ ಪಾದಯಾತ್ರಿಗಳಿಗೆ ನಾಡಿದ್ದು ದಿನಾಂಕ 19ರ ಬುಧವಾರ ಶಾಮನೂರಿನ ಪ್ರಕಾಶ್ ಅವರು ಶಾಮ ನೂರು ಮತ್ತು ಮಾಗಾನಹಳ್ಳಿ ಕೋಡಿ ಕ್ಯಾಂಪ್‌ನಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದಾರೆ.

# ಪ್ರಾಣಿ, ಪಶು ಬಲಿ ಕಾನೂನು-ಧರ್ಮ ವಿರೋಧಿ



ದಾವಣಗೆರೆ, ಫೆ. 17- ದೇವರು, ಧರ್ಮವನ್ನು ಮುಂದಿಟ್ಟುಕೊಂಡು ನೀಡುವ ಪ್ರಾಣಿ ಹಾಗೂ ಪಶುವಿನ ಬಲಿಯು ಅನಾಗರಿಕ, ಅಂಧಶ್ರದ್ಧೆ, ಪರಿಸರ ಮಾಲಿನ್ಯಕಾರಕ ಮಾತ್ರವಲ್ಲದೇ ಕಾನೂನು ಮತ್ತು ಧರ್ಮ ವಿರೋಧಿಯಾಗಿದೆ ಎಂದು ವಿಶ್ವ ಪ್ರಾಣಿ ಕಲ್ಯಾಣ ಮಂಡಳಿ, ಬಸವ ಧರ್ಮ ಜ್ಞಾನಪೀಠ ಮತ್ತು ಪಶು, ಪ್ರಾಣಿ ಬಲಿ ನಿರ್ಮೂಲನಾ ಮಹಾಸಂಘದ ಅಧ್ಯಕ್ಷರಾದ ಶ್ರೀ ದಯಾನಂದ ಸ್ವಾಮೀಜಿ ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಭಕ್ತಾದಿಗಳು ಪ್ರಾಣಿಬಲಿ ತ್ಯಜಿಸಿ ಅಹಿಂಸಾತ್ಮಕವಾಗಿ ಸಾತ್ವಿಕ ಪೂಜೆ ಸಲ್ಲಿಸಬೇಕು. ದೇವಸ್ಥಾನಗಳು ಕಸಾಯಿ ಖಾನೆ, ವದಾಲಯಗಳಾಗದೇ ದಿವ್ಯಾಲಯಗಳಾಗಬೇಕು. ಜಾತ್ರೆ, ಪರಿಸರಗಳ ಧಾರ್ಮಿಕ ಸ್ಥಾನಗಳು ಕಟುಕರ ಕೇರಿಗಳಾಗ ಬಾರದು ಜೀವ ತೆಗೆಯುವ ಮೃತ್ಯು ಕೂಪವಾಗ ಬಾರದು. ಪ್ರಾಣಿಹಿಂಸೆ ಮತ್ತು ಮದ್ಯ, ಮಾದಕ ಪದಾರ್ಥಗಳಿಂದ ಮುಕ್ತವಾಗಿರಬೇಕೆಂದರು.

ದೇವಾಲಯಗಳು ಅಹಿಂಸೆ, ಕರುಣೆ, ಪ್ರೇಮ, ಜೀವದಯೆ, ಮಾನವೀಯತೆ, ಆಧ್ಯಾತ್ಮಿಕತೆ ಮುಂತಾದ ದಿವ್ಯ ಮೌಲ್ಯಗಳನ್ನು ಸಾರುವ ಸುಸಂಸ್ಕಾರ ನೀಡುವ ದಿವ್ಯ ಧಾಮಗಳಾಗಬೇಕು. ಸದ್ಭಕ್ತಿ, ಸುಜ್ಞಾನ ಮತ್ತು ಸದಾಚಾರಗಳ ತ್ರಿವೇಣಿ ಸಂಗಮವಾಗಬೇಕು. ಈ ಹಿನ್ನೆಲೆಯಲ್ಲಿ ಭಕ್ತಾದಿಗಳು, ಸಮಾಜ, ದೇವಾಲಯದ ಆಡಳಿತ ಮಂಡಳಿ ಹಾಗೂ ಸರ್ಕಾರ ಮತ್ತು ಸುದ್ದಿ ಮಾಧ್ಯಮಗಳು ಕಾರ್ಯ ನಿರ್ವಹಿಸಬೇಕು ಎಂದು ಮನವಿ ಮಾಡಿದರು. ಈ ಕುರಿತು ಈಗಾಗಲೇ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಗೃಹ ಮತ್ತು ಪಶು ಸಂಗೋಪನಾ ಇಲಾಖೆ ಕಾರ್ಯದರ್ಶಿಗಳು, ರಾಜ್ಯ ಪೊಲೀಸ್ ಮಹಾ ನಿರ್ದೇಶಕರು, ದಾವಣಗೆರೆ ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ. ಆದರೂ ಕ್ರಮಕ್ಕೆ ಮುಂದಾಗುತ್ತಿಲ್ಲ ಎಂದರು.

ಕರ್ನಾಟಕ ಪ್ರಾಣಿ ಬಲಿಗಳ ಪ್ರತಿಬಂಧಕ ಅಧಿನಿಯಮದ ಪ್ರಕಾರ ಶಿಕ್ಷಾರ್ಹ ಅಪರಾಧವಾಗಿದೆ. ಈ ಪ್ರಾಣಿ ಬಲಿಯನ್ನು ಸಂಬಂಧಪಟ್ಟ ಇಲಾಖೆಗಳು ಕಾನೂನು ಹಾಗೂ ಹೈಕೋರ್ಟ್ ಆದೇಶಗಳ ಅಡಿಯಲ್ಲಿ ಸಂಪೂರ್ಣವಾಗಿ ತಡೆಗಟ್ಟಬೇಕು. ಪ್ರಾಣಿಗಳನ್ನು ಜಾತ್ರ ಪಾರಿಸರಕ್ಕೆ ಬಾರದಂತೆ ಕಟ್ಟೆಚ್ಚರ ವಹಿಸಬೇಕು ಎಂದು ಸರ್ಕಾರ, ಜಿಲ್ಲಾಡಳಿತ, ಜಿಲ್ಲಾ ಪೊಲೀಸ್ ಇಲಾಖೆಗೆ ಮನವಿ ಮಾಡಿದರು.

ಕರ್ನಾಟಕ ಗೋವಂಶ ಜಾನುವಾರು ಹತ್ಯೆ ಪ್ರತಿಬಂಧಕ ಕಾಯ್ದೆ ಪ್ರಕಾರ 13 ವರ್ಷದ ಒಳಗಿನ ಎಮ್ಮೆ, ಕೋಣ, ಅವುಗಳ ಕರುಗಳ ಹತ್ಯೆಯು ಶಿಕ್ಷಾರ್ಹ ಅಪರಾಧವಾಗಿದ್ದು, ಮೂರು ವರ್ಷಗಳ ಜೈಲು ಶಿಕ್ಷೆ ಮತ್ತು 50 ಸಾವಿರದಿಂದ 10 ಲಕ್ಷ ರೂ.ಗಳ ವರೆಗೆ ದಂಡ ವಿಧಿಸಲಾಗುವುದು ಎಂದು ಹೇಳಿದರು.

# ಬಾಲಕಿಯರ ಲೈಂಗಿಕ ಶೋಷಣೆ, ಮತಾಂತರಕ್ಕೆ ಬಲವಂತ : ಬಂಧನ

ಜೈಪುರ, ಫೆ. 17 - ಅಪ್ರಾಪ್ತ ಬಾಲಕಿಯರ ಲೈಂಗಿಕ ಶೋಷಣೆ ಮಾಡಿ ಅವರನ್ನು ಮತಾಂತರಕ್ಕೆ ಬಲವಂತ ಪಡಿಸಿದ ಆರೋಪದ ಮೇಲೆ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಏಳು ಜನರನ್ನು ಪೊಲೀಸರು ಬಂಧಿಸಿದ್ದಾರೆ.

ಐವರು ಬಾಲಕಿಯರು ಬಿಜಯ್ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಮೂರು ಎಫ್‌ಐಆರ್ ದಾಖಲಿಸಿಕೊಂಡಿರುವ ಪೊಲೀಸರು ಏಳು ಜನರನ್ನು ಬಂಧಿಸಿದ್ದಾರೆ. ಕೆಲ ವ್ಯಕ್ತಿಗಳು ಸಾಮಾಜಿಕ ಮಾಧ್ಯಮಗಳ ಮೂಲಕ ಪರಿಚಯವಾಗಿದ್ದರು. ಅವರ ಜೊತೆ ಮಾತನಾಡಲು ಚೀನಾದ ಮೊಬೈಲ್ ನೀಡಿದ್ದರು. ನಂತರ ತಮ್ಮನ್ನು ಲೈಂಗಿಕ ಶೋಷಣೆ ಹಾಗೂ ಬ್ಲಾಕ್ ಮೇಲ್ ಮಾಡಿ ಮತಾಂತರಕ್ಕೆ ಬಲವಂತ ಪಡಿಸಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

## ಆದರ್ಶ ವಿದ್ಯಾಲಯ 6ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ಹರಪನಹಳ್ಳಿ, ಫೆ.17 - ತಾಲ್ಲೂಕಿನ ಅನಂತನಹಳ್ಳಿ ಸಮೀಪದ ಸರ್ಕಾರಿ ಆದರ್ಶ ವಿದ್ಯಾಲಯದ 2025-26ನೇ ಸಾಲಿನ 6ನೇ ತರಗತಿ ದಾಖಲಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ 5ನೇ ತರಗತಿ ವ್ಯಾಸಂಗ ಮಾಡುತ್ತಿರುವ ತಾಲ್ಲೂಕಿನ ನಿವಾಸಿಗಳು www.schooleducation.kar.nic.in ಅಥವಾ www.vidyavahini.karnataka.gov.in ಇಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಫೆ.14ರಿಂದಲೇ ಅರ್ಜಿ ಸಲ್ಲಿಕೆ ಪ್ರಾರಂಭವಾಗಿದ್ದು, ಇದೇ ದಿನಾಂಕ 28 ಕೊನೆಯ ದಿನವಾಗಿದೆ ಮತ್ತು ಮಾ.23ರಂದು ಪರೀಕ್ಷೆ ನಡೆಯಲಿವೆ. ಮಾಹಿತಿಗಾಗಿ 9880955078, 7975534725, 9845977050 ಸಂಪರ್ಕಿಸಿ.


# ಚೌಡೇಶ್ವರಿ, ಭೂತಪ್ಪ ದೇವಸ್ಥಾನದ ಕಳಸಾರೋಹಣ



ಭೋಳಚಟ್ಟಿ ಚೌಡೇಶ್ವರಿ ದೇವಿ ಹಾಗೂ ಕಾಲಭೈರವ ಭೂತಪ್ಪ ಸ್ವಾಮಿ ದೇವಸ್ಥಾನ ಸೇವಾ ಸಮಿತಿಯಿಂದ ಇಂದು ಬೆಳಿಗ್ಗೆ 7.30ಕ್ಕೆ ವೀರಶೈವ ರುದ್ರಭೂಮಿ ಮುಂಭಾಗದ ಚೌಡೇಶ್ವರಿ ದೇವಿ ಮತ್ತು ಕಾಲಭೈರವ ಭೂತಪ್ಪ ಸ್ವಾಮಿ ದೇವಸ್ಥಾನದ ಕಳಸಾರೋಹಣ ಕಾರ್ಯಕ್ರಮ ನಡೆಯಲಿದೆ.

ಐರಣಿ ಹೊಳೆಮಠದ ಶ್ರೀ ಬಸವರಾಜ ದೇಶಿಕೇಂದ್ರ ಸ್ವಾಮೀಜಿ, ಆವರಗೊಳ್ಳ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ನಿಚ್ಚವ್ವನಹಳ್ಳಿ ಬೃಹನ್ಮಠದ ಶಿವಯೋಗಿ ಹಾಲಸ್ವಾಮಿಗಳು ಸಾನ್ನಿಧ್ಯ ವಹಿಸಲಿದ್ದಾರೆ ಎಂದು ದೇವಸ್ಥಾನ ಸೇವಾ ಸಮಿತಿ ಕಾರ್ಯದರ್ಶಿ ಕೆ. ಸಂತೋಷ್ ಗೌಡ್ರು ತಿಳಿಸಿದ್ದಾರೆ.

# ನಗರದಲ್ಲಿ ಇಂದು ಹರ್ಡೇಕರ್ ಮಂಜಪ್ಪ ಜಯಂತಿ



ಬಸವ ಬಳಗ, ಜಾಗತಿಕ ಲಿಂಗಾಯತ ಮಹಾಸಭಾ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ, ವಿರಕ್ತ ಮಠ ಹಾಗೂ ಬಸವ ಕಲಾಲೋಕ ಬಸಾಪುರ ಸಹಯೋಗದಲ್ಲಿ ಡಾ. ಶ್ರೀ ಬಸವಪ್ರಭು ಸ್ವಾಮೀಜಿ ನೇತೃತ್ವದಲ್ಲಿ ರೈಲ್ವೆ ಅಂಡರ್ ಬ್ರಿಡ್ಜ್ ಬಳಿ ಕರ್ನಾಟಕ ಗಾಂಧೀ ಶರಣ ಶ್ರೀ ಹರ್ಡೇಕರ್ ಮಂಜಪ್ಪನವರ 139ನೇ ಜಯಂತಿ ಇಂದು ಬೆಳಿಗ್ಗೆ 8ಕ್ಕೆ ಆಚರಿಸಲಾಗುವುದು.

ಶ್ರೀ ಬಸವ ಪ್ರಭು ಸ್ವಾಮೀಜಿ, ಆಲಮಟ್ಟಿ ವೀರಭದ್ರಪ್ಪ ಮಹಾಮಲ್ಲಪ್ಪ ಪಟ್ಟಣ ಶೆಟ್ಟಿ ಗಾಂಧೀ ವಾದಿ ಹರ್ಡೇಕರ್ ಮಂಜಪ್ಪ ಸ್ಮಾರಕ ಭವನದ ಕಾರ್ಯದರ್ಶಿಗಳು, ಬಸವ ಬಳಗದ ಅಧ್ಯಕ್ಷ ಎ.ಹೆಚ್. ಹುಚ್ಚಪ್ಪ ಮಾಸ್ಟರ್, ಕೆ.ಬಿ. ಪರಮೇಶ್ವರಪ್ಪ. ಕುಸುಮ ಲೋಕೇಶ್ ಗಾಯತ್ರಿ ವಸ್ತ್ರದ್, ಗೋಪನಾಳ್ ರುದ್ರಗೌಡ್ರು, ಅಗಡಿ ಮಹಾಂತೇಶ್, ಶರಣೆ ವೀಣಾ ಮಂಜುನಾಥ್, ಪಾಲಿಕೆ ಉಪಮೇಯರ್ ಸೋಗಿ ಶಾಂತಕುಮಾರ್ ಭಾಗವಹಿಸುವರು.

# ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ವರುಣ್



ದಾವಣಗೆರೆ, ಫೆ. 17 - ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಚುನಾವಣೆಯಲ್ಲಿ ಬಹುಮತ ಗಳಿಸುವ ಮೂಲಕ ಆಯ್ಕೆಯಾಗಿರುವ ವರುಣ್ ಬೆಣ್ಣೆಹಳ್ಳಿ ಅವರು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರನ್ನು ಭೇಟಿ ಮಾಡಿ, ಗೌರವಿಸಿದರು. ವರುಣ್, ನಗರಸಭೆ ಮಾಜಿ ಅಧ್ಯಕ್ಷರಾಗಿದ್ದ ದಿ|| ಶ್ರೀಮತಿ ಲಲಿತಮ್ಮ ತಿಪ್ಪೇಸ್ವಾಮಿ ಮತ್ತು ಕಾಂಗ್ರೆಸ್ ಮುಖಂಡ ಬೆಣ್ಣೆಹಳ್ಳಿ ತಿಪ್ಪೇಸ್ವಾಮಿ ದಂಪತಿ ಪುತ್ರ.

# ವಿನೋಬನಗರದಲ್ಲಿ ಕಾಮಗಾರಿಗೆ ಚಾಲನೆ



ದಾವಣಗೆರೆ, ಫೆ. 17 - ನಗರ ಪಾಲಿಕೆಯ 16ನೇ ವಾರ್ಡಿನ ವಿನೋಬ ನಗರ ಎರಡನೇ ಮುಖ್ಯ ರಸ್ತೆಯಲ್ಲಿ ನಗರ ಪಾಲಿಕೆಯ 15ನೇ ಹಣಕಾಸು ಯೋಜನೆಯ ಸುಮಾರು 98 ಲಕ್ಷದ ವೆಚ್ಚದಲ್ಲಿ ಸಿಸಿ ಚರಂಡಿ ಕಾಮಗಾರಿಗೆ ಚಾಲನೆ ನೀಡಲಾಯಿತು. ಈ ಸಂದರ್ಭ ದಲ್ಲಿ ವಾರ್ಡಿನ ಪಾಲಿಕೆ ಸದಸ್ಯ ಎ ನಾಗರಾಜ್ ಚಾಲನೆ ನೀಡಿದರು. ರವಿ, ರಾಮಚಂದ್ರ ರಾಯ್ಕರ್, ಸತೀಶ್, ನಾರಾಯಣಪ್ಪ, ರುದ್ರೇಶ್, ಯೋಗೇಶ್, ದಾನಪ್ಪ, ಚಂದ್ರಶೇಖರಪ್ಪ, ನಾಗರಾಜ್, ಮಂಜುನಾಥ್, ಪ್ರವೀಣ್, ಇಂಜಿನಿಯರ್ ನವೀನ್ ಇತರರು ಹಾಜರಿದ್ದರು.

# ಇಚ್ಛಾಮರಣ ಜಾರಿ : ಕಾನೂನು ಪ್ರಕ್ರಿಯೆ ಬಹಿರಂಗಪಡಿಸಲು ಆಗ್ರಹ



ದಾವಣಗೆರೆ, ಫೆ. 17 - ಮಾರಣಾಂತಿಕ ರೋಗಳಿಂದ ನರಳಿ ಸಾಯುವ ಹಂಚಿನಲ್ಲಿರುವ ರೋಗಿಗಳು ಗೌರವಯುತವಾಗಿ ಮರಣ ಹೊಂದಲು ದಯಾಮರಣ, ಇಚ್ಛಮರಣದಂತಹ ಐತಿಹಾಸಿಕ ಕಾನೂನನ್ನು ರಾಜ್ಯ ಸರ್ಕಾರ ಜಾರಿಗೆ ತಂದಿದ್ದು, ಅದರ ಕಾನೂನು ಪ್ರಕ್ರಿಯೆಗಳನ್ನು ಬಹಿರಂಗಪಡಿಸಬೇಕು. ಈ ಕಾನೂನು ಪ್ರಕ್ರಿಯೆಗೆ ಒಳಗಾಗುವ ಮೊದಲ ಮಹಿಳೆ ನಾನುಗುತ್ತೇನೆ ಎಂದು ನಿವೃತ್ತ ಶಿಕ್ಷಕಿಯೂ ಆಗಿರುವ ದಯಾ ಮರಣದ ಹೋರಾಟಗಾರ್ತಿ ಶ್ರೀಮತಿ ಹೆಚ್. ಬಿ.ಕರಿಬಸಮ್ಮ ಅವರು ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈ ಪ್ರಕ್ರಿಯೆ ಬಡವರ ಪಾಲಿನ ದೇಗುಲವಾದ ಸರ್ಕಾರಿ ಆಸ್ಪತ್ರೆಯಲ್ಲಿಯೇ ಈ ಕಾನೂನಿನ ವ್ಯವಸ್ಥೆಯಾಗಬೇಕೆಂಬ ಬೇಡಿಕೆ ನನ್ನದು. ಆಸ್ಪತ್ರೆಯಲ್ಲಿ ಒಂದು ಕೊಠಡಿ ಬಾಗಿಲ ಮೇಲೆ ದಯಾಮರಣ ನಿಗಾ ಘಟಕ ಎಂದು ಬರೆದಿರಬೇಕು. ದಯಾಮರಣಕ್ಕೆ ಒಳಗಾದ ವ್ಯಕ್ತಿ ಮಲಗಿರುವಾಗ ವೈದ್ಯರು ತಮ್ಮನ್ನು ಪರೀಕ್ಷಿಸುತ್ತಿರುಬಾಗ ರೋಗಿ ಅಸಹಾಯಕರಾಗಿ ಸುತ್ತಲೂ ನೋಟ ಬೀರುತ್ತಾ ಯಾತನೆ ಅನುಭವಿಸುವಾಗ ಸುತ್ತಲೂ ಕಣ್ಣಾಡಿಸಿದಾಗ ಶಾಂತಿ ದೊರೆಯಲು ಗೋಡೆಯ ಮೇಲೆ ಎಲ್ಲಾ ಧರ್ಮದವರ ಧಾರ್ಮಿಕ ಫೋಟೋಗಳನ್ನು ಹಾಕಿರಬೇಕು ಎಂದು ಮನವಿ ಮಾಡಿದರು.

ಹಸಿರು ಮಿಶ್ರಿತ ಬಣ್ಣ ಬಣ್ಣದ ಅಲಂಕಾರಿಕ ಹೂವಿನ ಕುಂಡಗಳನ್ನು ಇಡುವುದರಿಂದ ಕೃತಕ ಪ್ರಕೃತಿ ಸೃಷ್ಟಿಸಿದಂತಾಗುತ್ತದೆ. ಮಂದ ಬೆಳಕಿನಲ್ಲಿ ಮೆಲುದನಿಯ ಇಂಪಾದ ಸಂಗೀತ ನಾದ ಕೇಳಿವಂತಿರಬೇಕು. ಈ ಎಲ್ಲಾವುಗಳಿಂದ ದೇಹ ಎಷ್ಟೇ ಶಿಥಿಲ ವ್ಯವಸ್ಥೆಯಲ್ಲಿದ್ದರೂ, ನೋವಿದ್ದರೂ ಒಂದು ಮುಗುಳು ನಗೆಯಿಂದ ದಯಾಮರಣ ಸಾವನ್ನು ಅಪ್ಪಿಕೊಂಡಂತಾಗುತ್ತದೆ ಎಂದು ಸುಮ್ಮನಾದರೂ ಈಗ ಅಲ್ಪಸ್ವಲ್ಪ ನನ್ನ ಕೆಲಸ ಮಾಡಿಕೊಳ್ಳುವ ಸ್ಥಿತಿಯಲ್ಲದ್ದೇನೆ. ಮುಂದೆ ರೋಗಗಳು ಉಲ್ಬಣವಾಗಿ ಪರಾವಲಂಬಿಯಾಗಿ ಯಾತನಮಯ ಬದುಕು ಬೇಡವಾಗಿದೆ ಎಂದರು.

ಕಾನೂನು ಬರುವ ಮೊದಲೇ ಸ್ವ ಇಚ್ಛೆಯಿಂದ ಮರಣ ಹೊಂದಲು ಉಪವಾಸ ಕೈಗೊಂಡಿದ್ದೆ. ಈಗ ಕಾನೂನು ಬಂದಾಗಿದೆ. ವಯೋವೃದ್ಧರಲ್ಲಿ ಮೊದಲಿನವಳಾಗಿ ಈ ಕಾನೂನಿಗೆ ಒಳಗಾಗಲು ಆತ್ಮ ಸಂತೋಷದಿಂದ ಸಿದ್ಧಳಿದ್ದೇನೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ವಿಜಯಕುಮಾರಿ, ಹೆಚ್.ವಿ. ವೆಂಕಟೇಶ್ ಇದ್ದರು.

# ರೈಲ್ವೆ ನಿಲ್ದಾಣಗಳಲ್ಲಿ ಗುಂಪು ನಿಯಂತ್ರಣಕ್ಕೆ ಮಾರ್ಗಸೂಚಿ

ನವದೆಹಲಿ, ಫೆ. 17 - ರೈಲ್ವೆ ನಿಲ್ದಾಣಗಳಲ್ಲಿ ಗುಂಪು ನಿಯಂತ್ರಣಕ್ಕಾಗಿ ಮಾರ್ಗಸೂಚಿ ಪ್ರಕಟಿಸಲಾಗಿದೆ. ಇದರ ಅನ್ವಯ ಅತಿ ಹೆಚ್ಚು ಜನಸಂದಣಿ ಇರುವ 60 ನಿಲ್ದಾಣಗಳಲ್ಲಿ ಹೆಚ್ಚಿನ ಸ್ಥಳಾವಕಾಶ ಕಲ್ಪಿಸಲಾಗುವುದು ಹಾಗೂ ಪ್ರಯಾಣಿಕರು ಮೆಟ್ಟಿಲುಗಳ ಮೇಲೆ ಕೂರದಂತೆ ಅರಿವು ಮೂಡಿಸಲಾಗುವುದು.

ಈ ಬಗ್ಗೆ ಮಾತನಾಡಿರುವ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ಅತಿ ಹೆಚ್ಚು ಜನಸಂದಣಿ ಇರುವ 60 ನಿಲ್ದಾಣಗಳನ್ನು ಗುರುತಿಸಲಾಗಿದೆ. ತಾತ್ಕಾಲಿಕ ಇಲ್ಲವೇ ಶಾಶ್ವತವಾಗಿ ಹೆಚ್ಚಿನ ಸ್ಥಳಾವಕಾಶ ಕಲ್ಪಿಸಲಾಗುವುದು ಎಂದು ತಿಳಿಸಿದ್ದಾರೆ.

ಈಗಲೂ ಸಹ ಗುಂಪು ನಿಯಂತ್ರಣಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಗಳಿವೆ. ಆದರೆ ಅವುಗಳು ಹಲವಾರು ಸುತ್ತೋಲೆ ಹಾಗೂ ಪತ್ರಗಳಲ್ಲಿ ಹರಡಿವೆ. ಇವುಗಳೆಲ್ಲವನ್ನು ಒಂದೇ ಮಾರ್ಗಸೂಚಿ ರೂಪದಲ್ಲಿ ಪ್ರಕಟಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

WANTED
1) Accountant -2 No.s
Minimum 2 years experience in Accounting
Qualification B.com
2) Manager
Minimum 2 years experience
Qualification BBM / MBA
Contact
SAMYAK CERAMICS
HADADI ROAD, NEAR UDAY SUPER BAZAR,
DAVANGERE. Mobile : 94486 58255



